
ಕೊರವಂಜಿ



Koravanji

ಏಪ್ರಿಲ್

೧೯೫೦

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು :


ಶ್ರೀ|| ಬಚ್ಚ
ಶ್ರೀ|| ಅ. ರಾ. ಸೇ.
ಶ್ರೀ|| ಪ್ರಸಾದ್
ಶ್ರೀ|| ಶ್ರೀರಂಗ
ಶ್ರೀ|| ಯ-ಚ್ಚಂಪಿ
ಶ್ರೀ|| ಡೂನು
ಶ್ರೀ|| ಏ. ಆರ್. ವಾಮನರಾವ್
ಶ್ರೀ|| ಅ. ರಾ. ಸೆ.
ಶ್ರೀ|| ಪ್ರಕಾಶ್
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿಪ್ರತಿ ಕೇವಲ ನಾಲ್ಕಾಣೆ

ತಿಳಿನಗೆಯ ಮಾಸಪತ್ರಿಕೆ

ಶಾಲಿಮಾರ್ ಸೂಪರ್‌ಲ್ಯಾಕ್



ಕೈಗಾರಿಕೆಯಲ್ಲಿಯೂ
ಮತ್ತು
ಮನೆಯಲ್ಲಿಯೂ
ಉಪಯೋಗಿಸಲು
ಉಪಯುಕ್ತವಾದ
'ಉಜ್ವಲ' ಪೇಯಿಂಟು

ಶಾಲಿಮಾರ್ ಸೂಪರ್‌ಲ್ಯಾಕ್

ಸಿಂಥೆಟಿಕ್ ಎನಾಮೆಲ್



ಕೈಗಾರಿಕೆ ಮತ್ತು ಮನೆಯ ವಿವಿಧ ಕೆಲಸಗಳಿಗೆ ಅತಿ ಉಪಯುಕ್ತವಾದುದು. ಎಲ್ಲಾ ವಿಧದ ಯಂತ್ರ ಸಾಮಗ್ರಿಗಳಿಗೆ, ಸೈನ್ ಬೋರ್ಡುಗಳಿಗೆ ಮತ್ತು ಮರ ಹಾಗೂ ಲೋಹದ ಸಾಮಾನು, ಫರ್ನಿಚರ್, ಗೊಂಬೆ, ಮನೆವಟ್ಟು ಇತ್ಯಾದಿಗಳಿಗೆ ಆದರ್ಶಪ್ರಾಯವಾಗಿದೆ.

ಶಾಲಿಮಾರ್ ಸೂಪರ್‌ಲ್ಯಾಕ್ ಒಂದು ಶೀಘ್ರದಲ್ಲಿ ಗಟ್ಟಿಯಾಗಿ ಒಣಗುವ, ಬಹಳವಾಗಿ ಥಳಥಳಿಸುವ, ನಿಶ್ಚಿತ ಬಾಳಿಕೆಯಿರುವ, ಒಳಭಾಗಕ್ಕೂ ಅಥವಾ ಹೊರಭಾಗಕ್ಕೂ ಉಪಯೋಗಿಸಬಹುದಾದ ಪೇಯಿಂಟಾಗಿದೆ ಇದನ್ನು ಎಲ್ಲಾ ತೆರನಾದ ಜಾಗಗಳ ಮೇಲೆ ಬ್ರಶ್ಶಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ "ಡಿಪ್" ಮಾಡಿ ಹಚ್ಚಬಹುದು ಬಣ್ಣಗಳು ಒಂದರೊಂದಿಗೆ ಇನ್ನೊಂದನ್ನು ಕಲಸಬಹುದು

SHALIMAR PAINT, COLOUR & VARNISH CO., PRIVATE LTD.
Calcutta • Bombay • Madras • New Delhi • Kanpur

SPW 538 KN


For flawless, flowersoft
complexion...
Mysore Sandal Soap
Delicately Perfumed
MYSORE
Sandal
SOAP
GOVERNMENT SOAP FACTORY, BANGALORE 3.

ಕೊರವಂಜಿ

A ANANTHIAH

ಸಂಪುಟ ೨೩ ಏಪ್ರಿಲ್ ೧೯೬೦ ಸಂಚಿಕೆ ೧

❋ ಶು ಭಾ ಶ ಯ ❋

— ೦ —

ವಿಕಾರಿ ಮುಗಿಯಿತು. ಶಾರ್ವರಿ ಬಂತು. ಬೇವು ಬೆಲ್ಲ ಹಂಚಲ್ಪಟ್ಟಿತು. ಕೆಲವರಿಗೆ ಬೇವು, ಮತ್ತೆ ಕೆಲವರಿಗೆ ಬೆಲ್ಲ! ಹೀಗೇಕೆ ಆತ ಮಾಡಿದ್ದಾನೋ ಅವನಿಗೇ ಗೊತ್ತು. ಅದಕ್ಕೇ ತಾಯ ಹಿರಿಮೆಯನ್ನು ಸಂಪೂರ್ಣವಾಗಿ ಅರಿತ ಆಚಾರ್ಯರು "ಅವನೇ ನಾನು. ಅದನ್ನು ಅರಿಯಬೇಕು. ಅರಿವಿಗಾಗಿ ತಪಿಸ ಬೇಕು. ಅದೇ ತಪಸ್ಸು" ಎಂದಂದಿದ್ದು. "ಅವನನ್ನು ಕಟ್ಟಿಕೊಂಡು ನಾವ್ಯಾಕೆ ಗುದ್ದಾಡಿ ಒದ್ದಾಡಬೇಕು. ನಾನು ಅನ್ನುವುದನ್ನು ಕಳೆದುಕೊಂಡರಾಯಿತು. ಆಗ........ಅವನೇ" ಎಂದು ಭಕ್ತಪ್ರಧಾನ ಆಚಾರ್ಯರುಗಳು ಅಂದಿನಿಂದ ಹೇಳುತ್ತಿರುವುದು.

ಇಂತಹ ಅರಿವು ಬರಲೆಂದೇ ನಕ್ಕಿನಗಿಸಲು ಕೊರವಂಜಿ ತೊದಲ್ನುಡಿ ಆಡುತ್ತಿರುವಳು. ತಿಳಿದು ನಕ್ಕರೆ ಅವನತಿ ಸುಲಭವೋ ಎನ್ನಿಸುತ್ತಿದೆ.

ಕಡೆಗೆ ಸುಲಭವಿರಬಹುದು. ಆದರೆ ಸದ್ಯಕ್ಕೆ ತಪಿಸುವುದೇ ಕೊರವಂಜಿಯ ಹಣೆಬರಹ. ತಪಿಸುವುದರಲ್ಲೂ ಹಿತ ಕಾಣದಿದ್ದರೆ ಕೊರವಂಜಿಯು ಎಂದೋ ಕಣ್ಣುಮುಚ್ಚಿಕೊಳ್ಳುತ್ತಿದ್ದಳು. ಆದುದರಿಂದಲೇ ದೈವನಲ್ಲಿ ಮಣಿದು ವಿಕಾರಿಯ ವಿಕಾರವೆಲ್ಲಾ ಎಲ್ಲರಲ್ಲೂ ಅಳಿದು ಶಾರ್ವರಿಯು ಶಾಂತಿಸುಖ ಹಿತಗಳನ್ನು ಕೊಡಲೆಂದು ಹಾರೈಸುತ್ತೇವೆ.

—:೦:—

ಕುಹಕಿಡಿಗಳು

ವಿಕಾರಿಯ ಸೋಗನ್ನು ಮುಗಿಸಿಕೊಂಡ ನಂತರ ಚೌ ಎನ್ ಲೈರವರು ಭಾರತಕ್ಕೆ ಬರುವುದು ಬಲು ಶುಭವಾದ ಸುದ್ದಿ, ಅಲ್ಲವೇ ?

* * * *

ಕುಂದಾ ವಿದ್ಯುತ್‌ಗಾರದ ಶಂಕುಸ್ಥಾಪನೆಗೆ, ಅಣೆ ಕಟ್ಟಿನಲ್ಲಿ ನೀರಿಲ್ಲದಿದ್ದ ಪ್ರಯುಕ್ತ, ವಿದ್ಯುತ್‌ಶಕ್ತಿಯಿಂದ ನೀರನ್ನು ವಿದ್ಯುತ್ ತಿರುಗುಬುಟ್ಟಿಗಳಿಗೆ ಸರಬರಾಜು ಮಾಡಿ, ವಿದ್ಯುತ್‌ಶಕ್ತಿಯನ್ನು ತಯಾರಿಸಿದರಂತೆ !

* * * *

ಪಾಟ್ನಾದಲ್ಲಿ ನಡೆದ ಸ್ವತಂತ್ರಪಕ್ಷದ ಮಹಾ ಸಭೆಯಲ್ಲಿ, ಗಲಭೆಯಾಯಿತಂತೆ

—ಕಾರಣ ಇಷ್ಟೇ ನಮಗೆ ಹಿಂದಿ ಸ್ವಾತಂತ್ರ ಬೇಕು, ಬೇರೇನೂ ಬೇಡ ಅಂತ !!

* * * *

ಬರುವ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ರಾಜಾಜಿಯವರನ್ನು ಖಾಯಂ ರಾಷ್ಟ್ರಾಧ್ಯಕ್ಷರನ್ನಾಗಿ ಕಾಂಗ್ರೇಸಿಗರು ಆಯ್ಕೆ ಮಾಡುತ್ತಾರೆಂಬುದು ಖಚಿತವಾದ ಸುದ್ದಿಯಲ್ಲವಂತೆ !!

* * * *

ಸರ್ಕಾರಿ ನೌಕರರಿಗೆ ಕೊಡಲ್ಪಡುತ್ತಿರುವ ವೈದ್ಯಕೀಯ ಸೌಲಭ್ಯಗಳ ಜತೆಗೆ ಹುಚ್ಚಾಸ್ಪತ್ರೆಯ ಸೌಲಭ್ಯವನ್ನೂ ಇತ್ತೀಚೆಗೆ ಸೇರಿಸಲಾಯಿತಂತೆ.

—ನ್ಯಾಯವೇ ! ಸರ್ಕಾರದ ಕೆಲಸ ನೋಡಿದವರಿಗೆ ಇದರ ಅವಶ್ಯಕತೆ ಮೊದಲಿನಿಂದಲೂ ಬರುತ್ತಿತ್ತು.

* * * *

ಆಕಾಶವಾಣಿಯಿಂದ ಕೇಳಿ ಬಂದ ಕಾರ್ಯಕ್ರಮ ವಿವರಣೆ :—

ಮಿತಸಂತಾನದ ವಿಷಯವಾಗಿ ಶ್ರೀ....ಭಾಷಣ.

ಮಕ್ಕಳಿಗಾಗಿ ಕಾರ್ಯಕ್ರಮ.

ಯಾಕೆ ಈ ಹೆಸರುಗಳನ್ನು ಇಡುಲ್ಲ?

ಸ್ವಾಮೀ ನಷ್ಟಿಪರೇ,

ನನಗೊಂದು ಅನುಮಾನ ತಲೆಹೊಕ್ಕಿದೆ ಉತ್ತರಿಸುವಿರಾ ?

ನಾನು ಮಹಿಳಾ ಕಾಲೇಜಿನಲ್ಲಿ ಮೂರು ವರ್ಷಗಳಿಂದ ಮಾಲಿಯ ಕೆಲಸ ಮಾಡಿಕೊಂಡಿದ್ದೀನಿ. ಈಗ ಪರೀಕ್ಷೆಗಳ ಕಾಲ. ಅದಕ್ಕೋಸ್ಕರ ಬೆಂಚುಗಳನ್ನು ಪರೀಕ್ಷೆಗೆ ಸರಿಯಾಗಿ ಹಾಕುವ ಕೆಲಸಕ್ಕೂ ನನ್ನ ಹಾಕಿದ್ದಾರೆ. ಹೇಗೂ ಅಗ್ರಿಕಲ್ಚರ್ ಬಿ ಎಸ್‌ಸಿ ಮಾಡಿದ್ದೀ, ಇಂಗ್ಲೀಷು ಬರುತ್ತೆ, ಬೆಂಚಿನ ಮೇಲೆ ಪರೀಕ್ಷಾರ್ಥಿಗಳಾದ ವಿದ್ಯಾರ್ಥಿನಿಯರ ಹೆಸರಿನ ಚೀಟಿಯನ್ನು ಅಂಟಿಸು ಎಂದು ಪ್ರಿನ್ಸಿಪಾಲರು ಆ ಜವಾಬ್ದಾರಿಯನ್ನೂ ನನ್ನ ಮೇಲೆ ಹೇರಿದರು. ಆ ಕೆಲಸ ಮಾಡುವಾಗಲೇ ನನಗೆ ಅನುಮಾನ ಮೂಡಿತು. ಅದನ್ನೇ ನಿಮ್ಮ ಮೂಲಕ ಓದುಗರ ಮುಂದೆ ಇಡಲು ಬಯಸುತ್ತೇನೆ. ಅನುಮಾನ ಪರಿಹರಿಸುವಿರಾ ?

ಪರೀಕ್ಷೆಯ ದೊಡ್ಡ ತೊಟ್ಟಿಯಲ್ಲಿ ಅಂಟಿಸಲು ತೆಗೆದುಕೊಂಡ ಚೀಟಿಗಳ ನೂರಾ ಇಪ್ಪತ್ತೈದು ಹೆಸರುಗಳೆಲ್ಲಾ ಹೂವಿನ ಹೆಸರುಗಳೇ ಆಗಿದ್ದುವು. ಮೂರು ಚಂಪಾಬಾಯಿ, ಆರು ರೋಜಿ, ರೋಜಾದೇವಿ, ಎಂಟು ಮಲ್ಲಿಕಾ ಜಾನ್, ಬೇಗಂ ಹನ್ನೆರಡು ಕುಮುದ, ಹದಿನಾರು ಪಂಕಜ, ಹದಿನೆಂಟು ಪದ್ಮ, ಇಪ್ಪತ್ತುನಾಲ್ಕು ಕಮಲ, ಹದಿನಾರು ಸರೋಜ, ಹನ್ನೆರಡು ನೀರಜಾಬಾಯಿ, ದೇವಿ, ಇತ್ಯಾದಿ. ಎಂಟು ಜಲಜ, ಜಲಜಾಕ್ಷಿ, ದೇವಿ, ಇತ್ಯಾದಿ, ಎರಡು ಸರಸಿಜೆ ಅಕ್ಷಿ ಬಾಯಿ. ಹೀಗೆ ಪಟ್ಟಿ ಇದ್ದು, ನನಗೆ ತುಂಬಾ ಯೋಚನೆಗಿಟ್ಟುಕೊಂಡಿತು. ಅನುಮಾನ ಕವಿಯಿತು.

ಎಂತೆಂತಹಾ ಹೂವುಗಳಿದೆ, ಪ್ರಕೃತಿಯ ತೋಟದಲ್ಲಿ !

ಜಾಜಿ ! ಎಂತಹ ಹೂ !! ಎಂತಹ ತಿಳಿ ಸುಗಂಧ ! ಕಣ್ಣಿಗೆಷ್ಟು ಇಂಪು ! ಆದರೆ ಜಾಜಮ್ಮ, ಜಾಜೀಬಾಯಿ ಅಂತ ಯಾಕೆ ಹೆಸರನ್ನಿಡುವುದಿಲ್ಲ ?

ದಾಸವಾಳದ ಹೂ ! ತೋಟದ ಅಂಚಿನಲ್ಲಿ ಹೊರವಾಗಿ ದಟ್ಟವಾಗಿ ಬೇಲಿಯಂತೆ ಬೆಳೆದಿರುವ ದಾಸವಾಳದ ಹೂವಿನ ಹೆಸರನ್ನು ಮುಂದಾಳು ವಿದ್ಯಾರ್ಥಿನಿ

ಯಾರಿಗೆ ಏಕೆ ಇಡುವುದಿಲ್ಲ? ದಾಸವಾಳಾಬಾಯಿ! ಅಷ್ಟು ಹಿತವಿಲ್ಲದಿದ್ದರೆ, ಕುಮಾರಿ ಹೈಬಿಸ್ಕಸ್ ಅನ್ನಬಾರದೇ? ವಿಜ್ಞಾನದ ಸೋಗು ಹಾಕಿಕೊಂಡು.

ಮುತ್ತುಗದ ಹೂ! ಎಷ್ಟು ಚೆನ್ನ ನೋಡುಕ್ಕೆ, ಸ್ವಲ್ಪವೂ ಸುವಾಸನೆ ಇಲ್ಲ. ಎಷ್ಟೋ ಚಂದದ ಜನಕ್ಕೆ ಎಷ್ಟು ಅನ್ವರ್ಥವಾದ ಹೆಸರು? ಯಾಕೆ ಈ ಹೆಸರಿಡೋದಿಲ್ಲ ಜನರು!

ತಾಳೆ ಹೂವು! ರೂಪಿಲ್ಲದಿದ್ದರೂ ಎಂತಹ ಸುಗಂಧ! ಹಾವುಗಳೆಲ್ಲಾ ಹಿತಕ್ಕಾಗಿ ಅಪ್ಪುವ ಹೂವಿನ ಹೆಸರು! ಇಂತಹ ಸತ್ಯವಂತ ಹೆಸರನ್ನೇಕೆ ಇಡುಲ್ಲ ಜನರು!

ದುಂಡುಮಲ್ಲಿಗೆ! ಏಳೇಳು ಸುತ್ತು ಕಟ್ಟಿರುವವರಿಗೆ ಈ ಹೂವಿನ ಹೆಸರು ಎಷ್ಟು ಅನ್ವರ್ಥ! ಯಾಕೆ? ಈ ಹೆಸರನ್ನೂ ಇಡುವುದಿಲ್ಲ!

ಕಣಿಗಲೆ ಹೂ! ಎಷ್ಟು ಚಂದದ ಹೂ. ಹೂ ಬಿಟ್ಟ ಕಾವಿನಲ್ಲಿ ಎಂತೆಂತ ಘೋರ ವಿಷ ತುಂಬಿದೆ! ಆದರೆ ನೋಡಲು ಎಷ್ಟು ಚೆನ್ನ. ಇಂತಹ ಅರ್ಥ ತುಂಬಿದ ಹೆಸರನ್ನು ಯಾಕೆ? ಜನರು ಇಡುವುದಿಲ್ಲ?

ವಿಷ್ಣುಕಾಂತಿ ಹೂ! ನೋಡಿಲ್ಲವೇ, ತಿಳಿ ನೀಲಿಯ, ತಿಳಿ ಸುಗಂಧದ ಹೂ, ಸುಲಭವಾಗಿ ಕಣ್ಣಿಗೆ ಕಾಣಿಸದು. ಕಾಣದೆ ತುಳಿದ ಅಂಗಾಲಿಗೆ, ತನ್ನನ್ನೇ ಹಿಸುಕಿ ಕೊಂದ ಅಂಗಾಲಿಗೆ, ತನ್ನ ಸುಗಂಧವನ್ನೇ ಹಚ್ಚಿ ಕೃತಾರ್ಥವಾಗುವ ಹೂ! ತಾಯ್ತನದ ನಿಸ್ವಾರ್ಥ ಪ್ರೇಮದ ಮೂರ್ತಿಯಾದ ಈ ಹೂವಿನ ಹೆಸರನ್ನು ಯಾಕೆ ಹೆಣ್ಣುಮಕ್ಕಳಿಗೆ ಇಡುವುದಿಲ್ಲ?

ಶ್ಯಾವಂತಿಗೆ! ಎಂತಹ ತುಂಬಿಬರುವ ಹೂವು, ವರಲಕ್ಷ್ಮೀಗೆ ಪ್ರಿಯವಾದ ಹೂವು. ಎಳಸು ಎಳಸಿಗೆ ಹಣದ ವರವನ್ನು ಕೊಡುವ ಹೂವು. ವಿಶ್ವದ ಗಂಧವಿಲ್ಲದಿದ್ದರೂ, ಬಣ್ಣದ ಸೊಬಗಿಲ್ಲದಿದ್ದರೂ, ಕಣ್ಮನಗಳನ್ನು ಸೆಳೆಯುವ ಮೋಜಿಲ್ಲದಿದ್ದರೂ ಹಣದ ಅಧಿದೇವತೆಗೆ ಪ್ರಿಯವಾದ, ಮೆಚ್ಚಿನ ಹೂ. ಜೀವನದಲ್ಲಿ ಇದೇ ಸತ್ಯ ಎಂದು ನಿರ್ಧಾರ ಹೂಡುವ ಈ ಹೂವಿನ ಹೆಸರನ್ನು ಜನ ಯಾಕೆ ಇಡುವುದಿಲ್ಲ?

ಹಳೇ ಕಾಲದ ಹೂವುಗಳಿರಲಿ, ನಮ್ಮ ಹೂಗಳು ಎಷ್ಟು ಚೆನ್ನ!

ಭೋಗನ್‌ವಿಲ್ಲ! ಕೆಂಪೇರಿದ ತಿಳು ಕುಸುಮದ, ಬಳ್ಳಿಯಂತೆ ಸುತ್ತ ಬಳಸಿ ಮೆರೆವ ಹೂವಿನ ಹೆಸರನ್ನು ಯಾಕೆ ಇಡುವುದಿಲ್ಲ? ಕಡೆಗೆ ಇಲ್ಲವೇ ಇಲ್ಲ ಅಲ್ಲವೇ?

ಡಾಲಿಯಾ! ಎಂತಹ ಫೌಲಿನ ಹೆಸರು! ನಮ್ಮತ್ತೆಯನ್ನು ಕಂಡಂತೇ ಆಗುತ್ತೆ. ಅವರಪ್ಪ ಅಮ್ಮ ಈ ಹೆಸರನ್ನು ಯಾಕೆ ಇಡಲಿಲ್ಲ?

ನೈಟ್‌ಲೇಡಿ! ಹಗಲೆಲ್ಲಾ ಸುಪ್ತವಾಗಿದ್ದು, ಸೂರ್ಯ ಮುಳುಗಿದ ಅಂದರೆ ತನ್ನ ಇರುವಿಕೆಯನ್ನು ಮೂಗಿಗೆ ಸುಗಂಧದ ದಾರ ಹಾಕಿ ಸೆಳೆದು ಮೂರ್ಛೆ ಬರುವಂತೆ ಮಾಡುವ, ಅಜಗರಗಳಿಗೆ ಕೂಡ ಆಪ್ಯಾಯಮಾನವಾದ ಈ ನವ್ಯ ಹೂವಿನ ಪಾಶ್ಚಾತ್ಯ ಹೆಸರನ್ನೇಕೆ ಇಡುವುದಿಲ್ಲ?

ಮದನಮಂಜರಿ! ಹಚ್ಚ ಹಸಿರು ಹೂವು. ಕನ್ಯಾವಸ್ಥೆಯ ಹೂವು. ರಾಗ ದ್ವೇಷಗಳಿಂದ ಬಳಲಿ, ಬಿಳುಪೇರಿ, ಕುಸುಮವಾಗಿ, ರಂಗುರಂಗಿನ ಬೆಂಬಲವನ್ನು ಬೇಡದೇ ಇರುವ ಹೂವು. ಯಾಕೆ ಕುಮಾರಿಯರಿಗೆ ಈ ಹೆಸರನ್ನಿಡುವುದಿಲ್ಲ?

ನನಗನ್ನಿಸುತ್ತೆ, ಕೆಸರಿನ ಬಾಳು ಭೂಮಿಯಲ್ಲಿ ಹುಟ್ಟಿ ಕಣ್ಣೀರು ತುಂಬಿದ ಸಂಸಾರ ಸರೋವರದಲ್ಲಿ ಬೆಳೆದು, ಅಂಟೀ ಅಂಟದ ಹಾಗಿರುವ ಕಮಲದ ಹೆಸರನ್ನೇ (ನೂರಾಇಪ್ಪತ್ತೈದರಲ್ಲಿ—ಅಷ್ಟೋತ್ತರ ನಾಮಗಳನ್ನು) ಜನ ಬಲು ಹೆಚ್ಚಾಗಿ ಉಪಯೋಗಿಸುವುದೂ ನ್ಯಾಯವೇ! ಅಂತ

ಆದರೂ, ಮಾಯಾಚ್ಛಾದಿತರು ಲಿಲ್ಲಿ, ದವನ ಅಂತ ಹೆಸರಿಡೋ ಕಾಲದಲ್ಲಿ ಯಾಕೆ ಇತರ ಹೂವುಗಳ ಹೆಸರನ್ನು ಹೆಣ್ಣುಮಕ್ಕಳಿಗೆ ಇಡುಲ್ಲ?

—ಬಚ್ಚ

ಕಲ್ಲುಗಳ ಎಸತ ಜೋರಾದಾಗ, ಪೋಲೀಸು ಪೇದೆ ಓಡಲಿಕ್ಕೆ ಶುರು ಮಾಡಿದ ನಂತೆ—ವ್ಯಾನಿನಲ್ಲಿ ಕೂತಿದ್ದ ಅಧಿಕಾರಿ ಜೋರಾಗಿ ಕೂಗಿದನಂತೆ "ಯಾಕೋ ಓಡಿಹೋಗ್ತಾ ಇಧೀ" ಅಂತ.

—ಬೈಸಿಕಲ್ಲಿಲ್ಲ—ಮೋಟಾರ್ ವ್ಯಾನ್ ಇಲ್ಲ ಆದಕ್ಕೇ ಓಡ್ತಾ ಇಧೀನಿ ಅಂತ ಓಡೇ ಬಿಟ್ಟನಂತೆ—

*   *   *   *

ಮಂತ್ರಿಗಳಿಗೆ ಸ್ವಾಗತ

(ಒಂದು ರಹಸ್ಯ ಪತ್ರ ಗುಚ್ಛ)

ಶ್ರೀ ನೀಲಾಂಬರ ಇವರಿಗೆ,

ಪುರ ಸಭಾಧ್ಯಕ್ಷರ ಹುಜೂರು ಸೆಕ್ರೆಟರಿಗಳವರು ಮಾಡುವ ಹುಕ್ಕುಂ ಏನೆಂದರೆ, ನಮ್ಮ ಈ ಸುಂದರ ನಗರಕ್ಕೆ ಮಾನ್ಯ ಮಂತ್ರಿವರ್ಯ ಶ್ರೀ—ರವರು ಆಗಮಿಸುತ್ತಾರಾಗಿ, ಊರಿನ ನಾಗರಿಕರು ಸದರೀ ಸಚಿವಶ್ರೇಷ್ಠರಿಗೆ ಸ್ವಾಗತ ನೀಡಲೇಬೇಕಾಗಿ ಬಂದಿದೆ. ಸ್ವಾಗತ ಸಮಾರಂಭದಲ್ಲಿ ಸ್ವಾಗತ ಪದ್ಯಮಾಲಿಕೆಯನ್ನು ಅವರಿಗೆ ಅರ್ಪಿಸಬೇಕೆಂದು ಹುಜೂರ್ ಪ್ರೆಸಿಡೆಂಟರು ತೀರ್ಮಾನಿಸಿರುವುದರಿಂದ ನೀವು ಹೃತ್ಪೂರ್ವಕವಾದ ಸ್ವಾಗತಪದ್ಯವೊಂದನ್ನು ಬರೆಯಲೇಬೇಕೆಂದು ಹುಕ್ಕುಂ ಮಾಡಲಾಗಿದೆ. ಶೃತ. ಅತಿ ಜರೂರು. ನೀವು ಸೇವೆಯನ್ನು ಸಲ್ಲಿಸಲೇಬೇಕೆಂದು ಒತ್ತಾಯಪಡಿಸುತ್ತೇನೆ.

ಇಂತು,

....

ಸೆಕ್ರೆಟರಿ

ನಗರ ಸಭಾಧ್ಯಕ್ಷರ ಹುಜೂರು ಸೆಕ್ರೆಟರಿಗಳ ಆಫೀಸಿಗೆ,

ನಿಮ್ಮ ಪತ್ರ ಬಂತು. ಈ ದಿವಸ ತಾರೀಕು ಇಪ್ಪತ್ತೇಳು. ನಾಳೆ ಎಲೆಕ್ಟ್ರಿಕ್ ಬಿಲ್ ಕಟ್ಟಬೇಕು. ನಾನಿರುವ ಗೂಡಿಗೆ ಇಪ್ಪತ್ತೈದು ರೂಪಾಯಿ ಬಾಡಿಗೆಯ ಮೇಲೆ ಈ ಫೈನ್ ಬೇರೆ! ಎರಡು ದಿನಗಳಿಂದ ನಮ್ಮ ಮನೆ ನಲ್ಲಿಯಲ್ಲಿ ಹತ್ತೇ ನಿಮಿಷಗಳ ಕಾಲ ಮಾತ್ರ ನೀರು ಬರುತ್ತಿದೆ ನಿಮ್ಮ ದರಿದ್ರ ಸೊಸೈಟಿಯಲ್ಲಿ ಸಕ್ಕರೆ ಕೊಡಿ ಎಂದು ಕೇಳಿದರೆ ಈ ದಿನ ರವೆ ತೆಗೆದುಕೊಂಡರೆ ಮುಂದಿನ ಶುಕ್ರವಾರ ಸಕ್ಕರೆ ಕೊಟ್ಟರೂ ಕೊಡಬಹುದು ಎಂದರು. ರವೆ ಹಾಕಿದರೆ ಕಾಫಿ ಸಿಹಿಯಾಗುವುದೇ? ಖಾವಂದರು ಅಪ್ಪಣೆ ಕೊಡಿಸಿ. ಈ ದಿವಸ ಬೆಲ್ಲದ ಕಾಫಿಯನ್ನು ಕೊಟ್ಟ ನನ್ನ ಭಾರ್ಯೆ. ನಗುಮುಖದ ಸ್ವಾಗತವನ್ನು ಸಹ ನೀಡಲಿಲ್ಲ. ಕನ್ಸರ್ವೆನ್ಸಿ ಮೇಲಿನ ಗಾಳಿ ಬೀಸುತ್ತಿರುವುದರಿಂದ ಮೂಗು ಮುಚ್ಚಿಕೊಂಡೇ ಇರಬೇಕಾಗಿದೆ. ಹೀಗಾಗಿ ನಾನು ಹೃತ್ಪೂರ್ವಕ ಸ್ವಾಗತವನ್ನು ಯಾರಿಗೆ ಹೇಗೆ ಏಕೆ ಕೋರಲಿ ?

ಇಂತು,
ಭವದೀಯ.

ಶ್ರೀ ನೀಲಾಂಬರರಿಗೆ,

ಪುರಸಭಾಧ್ಯಕ್ಷರ ಹುಜೂರು ಸೆಕ್ರೆಟರಿಗಳು ಅಪ್ಪಣೆ ಕೊಡಿಸುವುದೇನೆಂದರೆ– ನಿಮ್ಮ ತಾಪತ್ರಯ ಕಟ್ಟಿಕೊಂಡು ನನಗೇನು. ನಾಳೆ ಬೆಳಗಿನೊಳಗಾಗಿ ಪದ್ಯ ನಮ್ಮ ಕೈಸೇರಬೇಕು. ಜನತಾ ಪ್ರತಿನಿಧಿಗಳಾದ ಸಚಿವ ಶ್ರೇಷ್ಠರಿಗೆ, ನಗರದ ಪುರೋಭಿವೃದ್ಧಿಗಾಗಿ ಟೊಂಕ ಕಟ್ಟಿರುವ ನಗರ ಪಿತೃಗಳು ನೀಡುವ ಈ ಸ್ವಾಗತದಲ್ಲಿ ಭಾಗ ವಹಿಸಿ ದೇಶದ ಮೇಲ್ಮೆಗಾಗಿ ಶ್ರಮಿಸಬೇಕೆಂದು ಇನ್ನೊಮ್ಮೆ ಹುಕ್ಕುಂ.

ಇಂತು,

ಹು। ಸೆ।

ಪುರ ಸಭಾಧ್ಯಕ್ಷರ ಹು। ಸೆ। ಗಳಿಗೆ,

ನಗರಪಿತೃಗಳು ಸಚಿವರಿಗೆ ಸ್ವಾಗತ ಕೊಟ್ಟರೂ ಜನತೆ ಈಗ ಕೊಡುವುದೇ? ಅದೇ ದಿನ ಕಾಲೇಜಿನಲ್ಲಿ ಸ್ಟ್ರೈಕಾಗುವುದಿಲ್ಲವೆಂದು ಯಾವ ಗ್ಯಾರಂಟಿ? ಸಹಕಾರ ಸಂಘದಲ್ಲಿ ದೊಂಬಿ, ಕೈಕೈ ಮಿಲಾವಣೆ, ಕೊಲೆ ನಡೆಯುವುದಿಲ್ಲವೆಂದು ಹೇಗೆ ಹೇಳಲು ಸಾಧ್ಯ. ಅದು ಬೇಡ; ಪೈ। ಖಲಂದರನ ಕುಸ್ತಿ ಇದ್ದರೆ ಸಾಕು. ಸಚಿವ ರನ್ನು ಸ್ವಾಗತಿಸಲು ನರಪಿಳ್ಳೆಯೂ ಬರುವುದಿಲ್ಲ. ಅಥವಾ ಸ್ವಾಗತ ಸಮಾರಂಭ ಭವನಕ್ಕೆ ಬರಸಿಡಿಲು ಬಡಿಯಬಾರದೇಕೆ?

ಇಂತು ತಮ್ಮವ,

ನಾನು.

ಶ್ರೀ ನೀಲಾಂಬರರಿಗೆ,

ನಿಮ್ಮ ತಲೆಹರಟೆ ಬೇಡ, ಸ್ವಾಗತಪದ್ಯ ಬೇಕು. ಅದನ್ನು ಬರೆದು ಕಳಿ ಸೆಂದು ನಿನಗೆ ಬರೆಯುತ್ತಿರುವುದು ಇದು ಮೂರನೆಯ ಬಾರಿ. ನಾವು ಒಂದು ಪದ್ಯ ಕೊಡಲು ಹಿಂಜರಿದರೆ ಅವರು ಹತ್ತುಲಕ್ಷ ಸಾಲ ಕೊಡುವುದು ಹೇಗೆ? ಈಗಲಾದರೂ ತಿಳಿಯಿತೇ? ಊರಿನ ಪುರೋಭಿವೃದ್ಧಿಗಾಗಿಯೇ ಇದು. ನೀನೊಬ್ಬನೇ ಈ ಊರಿಗೆ ಕಪಿಯಲ್ಲ ಗೊತ್ತೇ?

ಇಂತು,

ಸೆಕ್ರೆಟರಿ.

ಪ್ರೆಸಿಡೆಂಟರಿಗೆ ಹು|| ಸೆ||ಗಳಿಗೆ

ಎಷ್ಟು ಪಿಂಡಪ್ರದಾನ ಮಾಡಿದರೂ ಪಿತೃಗಳಿಗೇ ಸಾಲದೆಂದಮೇಲೆ ಊರಿನ ಪುರೋಭಿವೃದ್ಧಿಯ ಹುಸಿಕನಸಿನ ಆಸೆಗೆ ನಾನು ಬಲಿಯಾಗುವುದಿಲ್ಲ.

ಹೋದ ವರ್ಷ ಬಡ್ಜೆಟ್ ನೋಡಿದರೇ ಸಾಕು. ನೂರು ಲಕ್ಷ ರಸ್ತೆ ರಿಪೇರಿಗೆ ಖರ್ಚಂತೆ. ಈ ಊರಿನಲ್ಲಿ ಜರಡಿಗಳಿವೆಯೇ ಹೊರತು ರಸ್ತೆಗಳಿಲ್ಲ. ಇರುವ ಒಂದೇ ನೀರಿನ ಟ್ಯಾಂಕಿಗೆಂದು ಎಷ್ಟು ವರ್ಷ ಒಂದೊಂದು ಲಕ್ಷ ಖರ್ಚು ಹಾಕಿದಾರೆ, ಲೆಕ್ಕವಿದೆಯೇ? 27 ವಾಚನಾಲಯಗಳಂತೆ! ಅಲ್ಲೆಲ್ಲಾ ಸದಸ್ಯರ ಸಂಬಂಧೀಕರು ಆಶ್ರಿತರು ಇರುವ ಸುದ್ದಿಯೊಂದನ್ನು ಬಿಟ್ಟು ಇನ್ನೇನೂ ಸುದ್ದಿ ಅವುಗಳಿಂದ ತಿಳಿದಿಲ್ಲ. ಪೇಪರುಗಳಿದ್ದರೆ ತಾನೇ? ಈ ಊರಿನಲ್ಲಿ ಬೀದಿಯ ಗೂಳಿಗಳು, ಕನ್ಸರ್ವೆನ್ಸಿಯ ಕತ್ತೆ ನಾಯಿಗಳು, ಮನೆಯ ಸೊಳ್ಳೆ ತಿಗಣೆ ಪುರೋಭಿವೃದ್ಧಿ ಹೊಂದಿವೆಯೇ ವಿನಹ ಊರೂ, ನಾಗರಿಕರೂ ಅಲ್ಲ.

ನಾನು ಕಪಿಯೆಂದು ಯಾರು ಹೇಳಿದರು? ನಿಮ್ಮ ಈ ಸುಂದರ ನಗರದಲ್ಲಿ ಉದ್ದ ಮೂತಪ್ಪನೂ, ಸುಣ್ಣಗಾರನೂ ಕಂಡಕಂಡದ್ದನ್ನೆಲ್ಲಾ ಸ್ವಾಗತಿಸಿ ಬರೆಯುತ್ತಿರಲು ನಾನು ಹೇಗೆ ಕಪಿಯಾದೇನು? ಅವರ ಕೈಲೇ ಬರೆಸಿಕೊಳ್ಳಿ.

ಇಂತು ಭವದೀಯ.

ನೀಲಾಂಬರನಿಗೆ,

ಹಾಗೇ ಮಾಡೋಣವೆಂದುಕೊಂಡು ಪ್ರೆಸಿಡೆಂಟರಿಗೆ ಎಲ್ಲಾ ಹೇಳಿದೆ. ನಿನ್ಕೈಲಾಗ್ದಿದ್ರೆ ರಾಜೀನಾಮೆ ಕೊಡು. ಅವನ್ಕೈಲೇ ಬರಸ್ಕೊಂತಿವಿ' ಎಂದರು. ಉದ್ದ ಮೂತಪ್ಪ ಆರು ತಿಂಗಳಿಂದ ನಾಪತ್ತೆ. ಸುಣ್ಣಗಾರ ಪ್ರೆಸಿಡೆಂಟರ ಪಾರ್ಟಿಯಲ್ಲ ಅಪೋಸಿಟ್ ಪಾರ್ಟಿ. ಆದುದರಿಂದ ನೀವು ಬರೆದುಕೊಡುವಿರೋ, ನಾನು ರಾಜೀನಾಮೆ ಕೊಡಲೋ? ಬರೆದುಕೊಟ್ಟರೆ ನಿಮ್ಮನ್ನು ಸರಿಯಾಗಿ ನೋಡಿಕೊಳ್ಳುವೆ.

ಇಂತು,
ಹುಜೂರು ಸೆಕ್ರೆಟರಿ.

ಸೆಕ್ರೆಟರಿಗಳಿಗೆ,

ಮಿತ್ರಾ, ನೀನೇಕೆ ರಾಜೀನಾಮೆ ಕೊಡುವೆ? ಉದ್ದ ಮೂತಪ್ಪ ಮನೆ ಕಟ್ಟಿಸಿಕೊಂಡ; ಸುಣ್ಣಗಾರನಿಗೆ ಅಪೋಸಿಷನ್ ಪಾರ್ಟಿ ಆರುನೂರು ಕೊಟ್ಟಿತು ಎಂದ ಮಾತ್ರಕ್ಕೆ ನನ್ನನ್ನು ನೀನು ಸರಿಯಾಗಿ ನೋಡಿಕೊಳ್ಳುವುದು ಎಂದರೆ ಫಾಯಿದೆ ಮಾಡಿಕೊಳ್ಳುವುಧು ಸಹಜ. ಆದಕ್ಕೆ ನನ್ನ ಮನ ಒಲಿಯದು. ಊರಿನ ಪ್ರಜೆಗಳಿಗೆ ನಾಗರಿಕ ಸೌಲಭ್ಯಗಳು ದೊರೆಯದ ಹೊರತು ನನ್ನಿಂದ ನೀನು ಏನನ್ನೂ ನಿರೀಕ್ಷಿಸಬೇಡ. ನರರನ್ನು ಈ ನಾಲಿಗೆ ಮುಖಸ್ತುತಿ ಮಾಡದು. ಈ ವಿಷಯವನ್ನು ನಗರ ಸಭಾಧ್ಯಕ್ಷರಿಗೆ ತಿಳಿಸು.

ಇಂತು ನಾನು.

ಮಂಗ್ಯಾ........,

ನಿಂಗೇನಾಗೆತೋ ಕಡ್ಮೆ. ಊರ್ನ ಗಿರ್ಮೇಕು ಅಂತನೋ, ತೋಫ್ಡ ನಿಕಾಲ್ ಮಾಡನೋ? ಒಂದರ್ಜಿ ಬಿಗದ್ರೆ ಮೊಣಕಾಲ್ಮುರಿವಿಗೆ ವರ್ಗಾಕ್ತೈತೆ.

ಒಳ್ಳೇ ಮಾತ್ನಿಗೆ ಬರ್ಲೊಡ್ತೀಯೋ ಗಡೀಪಾರಾಗ್ತಿಯೋ ಬರ್ಲೊಟ್ರೆ ಸೈಟು ಸಿಗ್ತತೆ. ಇಲ್ದಿದ್ರೆ ಆ ಬಿಲ್ಲಿ ಪೇಪರ್ನನಿಗೆ ಒದ್ದಂಗೆ ತೌಡ್ಡರಿತಿವಿ. ಪದ್ಯ ಕಳ್ಸೋ.

ಇಂತು,
ನಗರಪಿತೃ (ಆದಿತ್ಯರೂಪ).

ಸೆಕ್ರಟರಿಗೆ,

ವರ್ಗಮಾಡ್ಸ ತಾಖತ್ತಿದ್ರೆ ಮಾಡಿಸ್ಲಿ. ಅಪೊಸಿಷನ್ ಪಾರ್ಟಿ ಸುಣ್ಣಾರೊಬ್ನಿಗೇ ಐತೋ ನಂಗೂ ಐತೋ? ಇದೇನ್ಮೊಗ್ಲಾಯೀ? ಇವತ್ಸಂಜೆ ಒಳ್ಗೆ ನಂಬೀದಿ ಕಸಹೊಡ್ಸಿ, ಲೈಟ್ರಿಪೇರಿ ಮಾಡ್ಸಿ, ನಲ್ಲಿನೀರು ಒಂದ್ಗಂಟೆ ಬಿಡ್ಸಿದ್ರೊ ಸಮ. ಪದ್ಯ ಕಳ್ಸಿದ್ರೂ ಕಳ್ಸ್ತೀನೆ. ಇಲ್ದಿದ್ರೆ ಅದ್ರ ಧೂಳನೂ ನಿಮಿಗೆ ಸಿಗಲ್ಲ. ತಿಳಿತೇ?

ಇಂತು, ಭವದೀಯ,
ನೀಲಾಂಬರ.

ಅ. ರಾ. ಸೇ.

ಶಾಂತಿ, ಶಾಂತಿ ಎಂದ್ಹಗಲಿರುಳು ಅರಚುವರು।
ತೌರಿಗೆ ಹೋದವಳು ಬರುವನಕ
ಶಾಂತಿ ಬರಿಯ ಭ್ರಾಂತಿ ಸ್ವಲ್ಪಜ್ಞ॥

* * * ?

ಸಪ್ತಸಾಗರವನೀಜಿ ಗಾಳಿಯೊಳು ತೇಲಿದರು।
ಓದಿರ್ಪಂಗೆ ಉದ್ಯೋಗ, ವಯಸ್ಕಳ್ಗೆ ವರ
ತಂದವರುಂಟೆ ಸ್ವಲ್ಪಜ್ಞ॥

* * * *

ಅಯ್ಯಯ್ಯೋ! ಅಂದಳು ರಂಗಜ್ಜಿ!

ನಮ್ಮನೇಲಿ ರಂಗಜ್ಜಿ ಕೋಡುಬಳೆ ಕರೀತಾಳೆ, ಅನ್ನೋದು ನಮ್ಮ ಕೇರೀಲೆಲ್ಲಾ ಮೂರು ದಿವಸಗಳ ಮುಂಚಿನಿಂದ ಎಲ್ಲರಿಗೂ ಗೊತ್ತಾಗಿ ಹೋಗಿರುತ್ತೆ. ಯಾಕೆ ಅಂದರೆ ರಂಗಜ್ಜೀನೇ ರಂಗಶೆಟ್ಟಿ ಅಂಗಡೀಗೆ ಹೋಗಿ ತಾನೇ ಚುನಾಯಿಸಿ ತೆಂಗಿನಕಾಯಿ ಕೊಂಡು ತರುತ್ತಾಳೆ. ಭೀಮಶೆಟ್ಟಿ ಅಂಗಡೀಲಿ ಮೂರು ಸೇರು ಮರಳು ಕಾಂತಿ ಭತ್ತವನ್ನೂ ತಾನೇ ತರುತ್ತಾಳೆ. ಗುಡೀಗೆ ಹೋಗಿ ಭಟ್ಟರ ಮನೇಲಿ ಒಂದು ಹಿಡಿ ಜೀರಿಗೆ ಇಸುಕೊಂಡು ಬರ್ತಾಳೆ. ಹೀಗೆ ಸಿದ್ಧತೆ ಮಾಡಿ, ತಾನೇ ಅಕ್ಕಿ ಹಿಟ್ಟು ಬೀಸಿ, ತಾನೇ ಕಲಸಿ, ತಾನೇ ಕೋಡುಬಳೆ ಕರಿಯುತ್ತಾಳೆ ಅದಕ್ಕೇ ಅಷ್ಟು ರುಚಿಯಾಗಿರುತ್ತೆ. ಹೊಟ್ಟೆನೋವು ಅಂತ ಶ್ರೀಮಂತನಾದಮೇಲೆ ನರಳುತ್ತಿದ್ದ ನಮ್ಮ ಸೋದರಮಾವ ಕೂಡ ಊಟ ಆದಮೇಲೆ ರಂಗಜ್ಜಿ ಮಾಡಿದ ಕೋಡುಬಳೆ ಸಿಕ್ಕಿದರೆ ನಾಲ್ಕು ಆರು ಎಂಟು ಕೂಡ ಮುಗಿಸುತ್ತಿದ್ದ. ಆದುದರಿಂದಲೇ ನಮ್ಮನೆಗೆ ಕೋಡುಬಳೆ ಮಾಡಿದ ದಿನ ಅತಿಥಿಗಳು ಅಭ್ಯಾಗತರಾಗಿ ಬರುತ್ತಾರೆ.

ಹೋದ ಸೋಮವಾರ ಸಂಜೆ ಕಚೇರಿಯಿಂದ ಮನೆಗೆ ಬಂದಾಗ ಡಾಕ್ಟರ್ ಮಾಧವರಾಯರು ದಂಪತಿ ಸಮೇತ ಹಜಾರದಲ್ಲಿ ಕೂತಿದ್ದುದನ್ನು ಕಂಡಾಗ ಓಹೋ! ಈವತ್ತು ರಂಗಜ್ಜಿ ಕೋಡುಬಳೆ ಕರೆದಿದ್ದಾಳೆ ಅಂತ ತಿಳಿಯಿತು. ಯಾಕೆ ಅಂದರೆ ಹೇಳಿ ಕರೆಸಿದರೂ ಬಾರದೇ ಇದ್ದ ನಮ್ಮ ಡಾಕ್ಟರು, ತಾವೇ ಬರೋದು ಅಂದರೆ ಒಂದೇ ಕಾರಣ ಅಂತ ನನಗೆ ಗೊತ್ತಿತ್ತು. ಕೋಡುಬಳೆಯೇ ಕಾರಣ! ನಾನೂ ಊಹಿಸಿದಂತೆಯೇ, ಎರಡೇ ನಿಮಿಷಗಳಲ್ಲಿ ರಂಗಜ್ಜಿ ಬಂದು ತಟ್ಟೇಲಿ ಒಂದು ಸರ ಕೋಡುಬಳೆ ಇಟ್ಟು ಡಾಕ್ಟರೆದುರಿಗೆ ಇಟ್ಟಳು. ಮೊಮ್ಮಕ್ಕಳ ಹತ್ತಿರ ಮಾತನಾಡುವ ಸಲಿಗೆಯಿಂದಲೇ ಡಾಕ್ಟರ ಹತ್ತಿರ ಕೂಡ ರಂಗಜ್ಜಿ ಮಾತನಾಡುತ್ತಿದ್ದಳು.

"ಹದ ಕೆಡದ ಹಾಗೆ, ರುಚಿ ಸ್ವಲ್ಪವೂ ವ್ಯತ್ಯಾಸವಾಗದ ಹಾಗೆ ಕೋಡುಬಳೆಗಳನ್ನು ಹೇಗೆ ಮಾಡ್ತೀರಿ ಅಜ್ಜಿ" ಎಂದು ಡಾಕ್ಟರು ಕೇಳಿದಾಗ, ಮಾಡಿ ಮಾಡಿ ಅಭ್ಯಾಸಾಪ್ಪ, ಇವರು ಇದ್ದಾಗ, ರುಚಿ ಸ್ವಲ್ಪ ವ್ಯತ್ಯಾಸ ಆದರೆ ನನ್ನ ಕತ್ತಿಗೆ ಕೋಡುಬಳೆ ಸರ ಹಾಕಿ ದೇವಸ್ಥಾನಕ್ಕೆ ಮಂಗಳಾರತೀಗೆ ಕರೆದುಕೊಂಡು ಹೋಗುತ್ತಿದ್ದರು. ಅಂತಹ ಕರಾಚೂರೀ ಅಪ್ಪಾ ಅವರು, ಕೋಪ ಅಂದರೆ ದೂರ್ವಾಸರು ಕೂಡ ಇವರ ಹತ್ತಿರಾನೇ ಕಲಿತುಕೋಬಹುದಾಗಿತ್ತು. ಹಾಗಾಗಿ ಕಲಿತಿದ್ದಪ್ಪ ಎಂದರು ರಂಗಜ್ಜಿ.

ಡಾಕ್ಟರ ಹೆಂಡತಿ ಸುಮ್ಮನಿರಬೇಕಲ್ಲ. "ಅಲ್ಲಾ! ಅಜ್ಜಿ ಆವಾಗ ರುಚಿ ನೋಡಿ ನೋಡಿ ಕೋಡುಬಳೆ ಮಾಡ್ತಾಇದ್ದಿರಿ. ಸರಿಹೋಗ್ತಿತ್ತು. ಈಗ ಹಲ್ಲೆಲ್ಲಾ ಬಿದ್ದುಹೋಗಿದೆ. ರುಚಿ ನೋಡಲು ಕಷ್ಟ. ಹೇಗೆ ಮಾಡ್ತೀರೀ ಅಜ್ಜಿ" ಎಂದು ತನ್ನ ಹೆಣ್ಣು ಬುದ್ಧಿವಂತಿಕೇನ ಉಪಯೋಗಿಸಿದಳು. ಕೋಡುಬಳೇ ರುಚೀನ ಕರಿದ ಮೇಲೆ ನೋಡೋದಲ್ಲಾ ತಾಯಿ! ಹಿಟ್ಟು ಕಲೆಸೋವಾಗಲೇ ರುಚಿ ನೋಡೋದು ಕರಿಯೋವಾಗ ಬಣ್ಣ ನೋಡಿಯೇ ಹದ ತಿಳಿಕೋಬೇಕಮ್ಮಾ, ಕಲಸಿದ ಹಿಟ್ಟಿನ ರುಚಿ ನೋಡೋದು ನಾಲಿಗೆಯಿಂದ ತಾಯಿ, ಹಲ್ಲುಗಳಿಂದಲ್ಲ ಎಂದು ರಂಗಜ್ಜಿ ಹೆಣ್ತತನದ ಜಾಣ ಮಾತನ್ನೇ ಆಡಿದಳು.

ತನ್ನ ಹೆಂಡತಿ ಜತೀಲಿ ವಾಗ್ಯುದ್ಧ ನಡೆದಾಗಲೆಲ್ಲಾ ಸೋಲುವ ಡಾಕ್ಟರ್ ಮಾಧವರಾಯನಿಗೆ ಹೆಂಡತಿಗೆ 'ಸೋಲಾಯ್ತು ಎಂದರೆ, ಸೋಲಿಸಿದವರು ಬಲು ಹಿತವಾಗುತ್ತಿದ್ದರು "ರಂಗಜ್ಜೀ! ಚೆನ್ನಾಗಿ ಅಂದ್ರಿ. ಇವಳಿಗೆ ಎಷ್ಟು ಹೇಳಿದರೂ ಗೊತ್ತಾಗುಲ್ಲ. ನೀವಾದರೂ ಬುದ್ದಿ ಕಲಿಸೀಮ್ಮ" ಅಂತ ಹೇಳಿ ಹೆಂಡತಿ ಕಡೆ ನೋಡಿ ಕೇಕೇ ಹಾಕಿದ.

"ಇಲ್ಲಿ ನಿಮ್ಮ ನಾಟಕ ಆಡಬೇಡಿ ಅಂದ್ರೆ—ನಕ್ಕಾರು ಕಂಡವರು" ಎಂದು ಹೆಂಡತಿ ಸೇಡು ತೀರಿಸಿಕೊಂಡಳು.

ಇಂತಹ ಸ್ನೇಹಮಯವಾತಾವರಣ, ನಮ್ಮ ಮನೆಯಲ್ಲಿ. ಡಾಕ್ಟರು ಮಾಧವರಾಯರು ಬಂದಾಗ.

* * * *

ಮಂಗಳವಾರ ರಂಗಜ್ಜಿ ಊಟಮಾಡಲಿಲ್ಲ. ಏಕಾದಶಿ ಪ್ರಯುಕ್ತ ಅಂತ ಅಂದುಕೊಂಡೆವು. ಬುಧುವಾರ ಮೈ ಜಡ್ಡಾಗಿದೇಪ್ಪ ಅಂತ ಏನೂ ಆಹಾರ ತಿಗೆದುಕೊಳ್ಳಲಿಲ್ಲ. ಡಾಕ್ಟರಿಗೆ 'ಹೇಳಿ ಕಳಿಸುತ್ತೇನೆ ಅಂದರೆ ಬೇಡ ಅಂದಳು. ಹಠ ಎಂದರೆ ರಂಗಜ್ಜಿ ಹಠ ಹೆಸರಾದ್ದು. ಕಾರಣ ಸುಮ್ಮನಿದ್ದೆ. ಆದರೆ ಗುರುವಾರ ತೊದಲು ತೊದಲು ಮಾತಾಡಿದಾಗ ಗಾಬರಿಯಾಗಿ ಡಾಕ್ಟರನ್ನು ಕರೆದೆ. ಬಂದು ನೋಡಿದ ಕೂಡಲೇ ಡಾ|| ಮಾಧವರಾಯ ರೇಗಿಯೇಬಿಟ್ಟ. ರಂಗಜ್ಜೀಗೆ ಸಕ್ಕರೆ ಬ್ಯಾನೆ ಇದೆ ಅಂತ ಗೊತ್ತಿಲ್ಲವೇ ನಿಮಗೆ. ಮೂರು ದಿವಸಗಳಿಂದ, ಉಪವಾಸ ಮಾಡಿ ಬ್ಯಾನೆ ಹೆಚ್ಚಾಗಿಬಿಟ್ಟಿದೆ. ವಿಷವೆಲ್ಲಾ ಮೆದುಳಿಗೆ ತಟ್ಟಿದೆ. ಸನ್ನಿ ಹತ್ತಿದೆ. ಬಲು ಹುಷಾರಾಗಿರಬೇಕು. ಅಂತ ನಮ್ಮನ್ನ ಗದರಿಸುತ್ತಾ ಕೈಗೊಂದು ತೋಳಿಗೊಂದು ಇನ್‌ಜಕ್ಷನ್ನು ಕೊಟ್ಟು, ಈ ಔಷಧಿಯನ್ನು ಎರಡು ಗಂಟೆಗೆ ಒಂದು ಸಾರಿ ಕೊಡಿ, ಸಂಜೆಮುಂಚೆ ಬಂದು ನೋಡುತ್ತೇನೆ ಎಂದು ಹೇಳಿ ಹೋದರು. ಸಂಜೆ ಮುಂಚೆ ಬಂದು ಇನ್ನೂ ನಾಲ್ಕು ಇನ್‌ಜಕ್ಷನ್ ಕೊಟ್ಟು, ನಾಳೆ ಬೆಳಿಗ್ಗೆ ಬರ್ತೀನಿ ಅಂತ ಹೇಳಿ ಹೊರಟುಹೋದರು. ಮೂರು ದಿನಗಳು ಹೀಗೆ ಚಿಕಿತ್ಸೆ ಮಾಡಿದರೂ, ರಂಗಜ್ಜೀಗೆ ಎಚ್ಚರ ಬರಲಿಲ್ಲ. ಭಾನುವಾರ ಮಧ್ಯಾಹ್ನ ಡಾಕ್ಟರು ಬಂದಾಗ

ನನಗೆ ಹೇಳಿದರು "ಯಾಕೋ! ರಂಗಜ್ಜೀ ದೇಹಸ್ಥಿತಿ ಚೆನ್ನಾಗಿಲ್ಲ. ನಾನು ಮಾಡೋ ಕೆಲಸವೆಲ್ಲಾ ಮಾಡಿಯಾಯ್ತು. ದುಷ್ಟ ಚಿಹ್ನೆಗಳೇನಾದರೂ ಕಂಡು ಬಂದರೆ ಇನ್ನೇನಾದರೂ ಚಿಕಿತ್ಸೆ ಮಾಡಬೇಕು. ಅಲ್ಲಿನತನಕ ಸುಮ್ಮನೆ ಇರಬೇಕು. ಈ ಸಂಜೆ ನಮ್ಮ ಡಾಕ್ಟರ ಸಂಘದವರು "ಭಕ್ತ ಮಾರ್ಕಂಡೇಯ" ನಾಟಕ ಆಡ್ತಾರೆ. ಸಚಿವರೆಲ್ಲ ಬಂದಿರ್ತಾರೆ. ನಾನೂ ಪಾತ್ರ ವಹಿಸಬೇಕಾಗಿದೆ. ಆದ್ದರಿಂದ, ಏನಾದರೂ ಕೆಟ್ಟ ಚಿಹ್ನೆಗಳು ಕಾಣಿಸಿಕೊಂಡರೆ, ಸಂಘದ ಹತ್ತಿರಕ್ಕೇ ಬಂದುಬಿಡು. ನನ್ನ ಪಾತ್ರ ಮುಗಿದಿದ್ದರೆ ನಾನೇ ಬರ್ತೀನೆ. ಇಲ್ಲದೆ ಇದ್ದರೆ ನನ್ನ ಜತೆಯವರ ನ್ನಾದರೂ ಕಳಿಸುತ್ತೇನೆ. ಕೆಟ್ಟ ಚಿಹ್ನೆಗಳು ಅಂದರೆ, ಹಣೆಮೇಲೆಲ್ಲಾ ಬೆವರು ಹನಿ ತುಂಬಿ ಬರೋದು ಅಥವಾ ಉಸಿರಾಡುವುದು, ನಿಂತಹಾಗೆ ಆಗಿ ಹೆಚ್ಚಾಗೋದು, ಅಥವಾ ಮೈಯಲ್ಲಾ ಬೆಚ್ಚಿ ಬೀಳೋಹಾಗೆ ಸೆಳೆವು ಬಂದಂತಾಗೋದು. ನಾನು ಹೇಳಿದೆ ಅಂತ ಗಾಬರಿಯಾಗಿ ಸುಮ್ಮ ಸುಮ್ಮನೆ ಬಂದು ಕರೆಯಬೇಡಿ. ಆದರೆ ಸಂಕೋಚಪಟ್ಟುಕೊಂಡು ಸುಮ್ಮನೇನೂ ಇರಬೇಡಿ ಅಂತ ಹೇಳಿ ಹೋದರು.

ಭಾನುವಾರ ರಾತ್ರಿ ಹತ್ತು ಗಂಟೆ ಹೊತ್ತಿಗೆ ರಂಗಜ್ಜಿಯ ಹಣೆಯಮೇಲೆ ಬೆವರು ಹನಿ ಚಿಮ್ಮಲು ಶುರುವಾಯ್ತು. ಎಷ್ಟೆಷ್ಟು ಒರೆಸಿದರೂ ಚಿಮ್ಮುತ್ತಲೆ ಇತ್ತು. ಡಾಕ್ಟರನ್ನು ಕರೆದುಕೊಂಡು ಬರ್ತೀನಿ ಎಂದು ಹೇಳಿ ಅವಸರದಲ್ಲಿ ವೈದ್ಯರ ಸಂಘದತ್ತ ಟ್ಯಾಕ್ಸಿ ತೆಗೆದುಕೊಂಡು ಓಡಿದೆ. ನನ್ನ ಪುಣ್ಯ. ನಾಟಕ ಮುಗಿದಿತ್ತು. ನಟರು ಇನ್ನೂ ತಮ್ಮ ವೇಷ ಭೂಷಣಗಳನ್ನು ತೆಗೆದಿರಲಿಲ್ಲ. ಶೃಂಗಾರದ ಕೊಠಡೀಗೆ ಹೋಗಿ ಡಾ|| ಮಾಧವರಾಯನಿಗೆ ವಿಷಯ ತಿಳಿಸಿದೆ. ಆತ ತಕ್ಷಣ ನನ್ನೊಡನೆ ತನ್ನ ಔಷಧಿ ಪೆಟ್ಟಿಗೆಯನ್ನು ತೆಗೆದುಕೊಂಡು ಬಂದು ಟ್ಯಾಕ್ಸಿ ಯಲ್ಲಿ ಕುಳಿತ. ಝುಟ್ಟಂತ ಮನೆಗೆ ಬಂದೆವು. ಡಾಕ್ಟರು ಚೀಲ ಬಿಚ್ಚಿ ಎರಡು ಇನ್‌ಜಕ್ಷನ್ ಕೊಟ್ಟರು. ನಾಲಿಗೆ ಕೆಳಗೆ ಒಂದೆರಡು ತೊಟ್ಟು ಔಷಧಿ ಇಟ್ಟರು

ಬೆವರು ಇಳಿಯುವುದು ಕಡಿಮೆಯಾಯ್ತು. ಕಣ್ಣು ರೆಪ್ಪೆ ಹಾರಿಸಿದ ಹಾಗೆ ಕಂಡಿತು. ನಾವೆಲ್ಲಾ ಸುತ್ತಲೂ ಎವೆಯಿಕ್ಕದೆ ನೋಡುತ್ತಲೇ ಇದ್ದೆವು. ಒಂದೈದು ನಿಮಿಷ ಆಗಿರಬಹುದು. ರಂಗಜ್ಜಿ ಕಣ್ಣು ಬಿಟ್ಟಳು. ಎದುರಿದ್ದ ಡಾಕ್ಟರನ್ನು ನೋಡಿದಳು. ತಲೆಯಾಡಿಸಿದಳು. ತಿರುಗಿ ದೃಷ್ಟಿಸಿ ನೋಡಿದಳು.

"ಅಯ್ಯೋ ಅಯ್ಯಯ್ಯೋ !" ಅಂತ ಚೀರಿದಳು ರಂಗಜ್ಜಿ.

"ಬಂದುಬಿಟ್ಟೆಯಪ್ಪಾ ಕರಕೊಂಡು ಹೋಗುಕ್ಕೆ" ಅಂದಳು ರಂಗಜ್ಜಿ.

ಕಣ್ಣು ಮುಚ್ಚಿದಳು ರಂಗಜ್ಜಿ. ಉಸಿರಾಡುವುದು ನಿಂತಿತು. ಹೋಗಿಬಿಟ್ಟಳು ರಂಗಜ್ಜಿ. ಭಕ್ತ ಮಾರ್ಕಂಡೇಯ ನಾಟಕದಲ್ಲಿ ಡಾಕ್ಟರು "ಯಮನ" ಪಾತ್ರ ವಹಿಸಿದ್ದರು!! ಅದೇ ವೇಷದಲ್ಲಿ ಬಂದಿದ್ದರು.

—ಪ್ರಸಾದ್

ತಲೆ ತಪ್ಪಿಸಿಕೊಂಡೆ!

ನಿಜವಾಗಿ ನಾನು ಕೊರವಂಜಿಗಾಗಿ ಬರೆದ ಲೇಖ ಇದಲ್ಲ! ಇನ್ನೊಂದನ್ನೆ ಬರೆದಿದ್ದೆ; ಅದನ್ನು ನೋಡಿದ್ದರೆ ನೀವು-ಎಂದರೆ ನಿಮ್ಮ ಓದುಗರು ಎಷ್ಟು ಮೆಚ್ಚ ಬಹುದಾಗಿತ್ತು! ಆದರೇನು? ಅದು ಕಳೆದು ಹೋಯಿತು! ಮನೆ ತುಂಬ ಅದನ್ನ ಶೋಧಿಸಿದೆ. ಕೊನೆಗೆ ಸರಕಾರೀ ಫೈಲ್ ಅಂತ ತಿಳಿದು ಅದನ್ನು ರದ್ದೀ ಪೇಪರ್ ಅಂತ ರವಾನಿಸಿರಬಹುದೇನೊ ಅನ್ನೋ ಸಂಶಯದಿಂದ ಸೆಟ್ಟರ ಅಂಗ್ಡೀಗೂ ಹೋದೆ ಸೆಕಂಡ್ ಹ್ಯಾಂಡ್ ಪುಸ್ತಕಗಳ ಮಾರಾಟಗಾರರ ಕಡೆ ಹೋದೆ; ಅಲ್ಲಿ ನನ್ದೆ ಒಂದು ಪುಸ್ತಕದ ಹೊರತು ಬೇರೆ ಏನೂ ನನ್ನದು ಅನ್ನೋದು ಸಿಕ್ಕಲಿಲ್ಲ. ಕೊನೆಗೆ ಮತ್ತೆ ಮನೆಯಲ್ಲಿ ಶೋಧಿಸ ತೊಡಗಿದೆ, ತಟ್ಟನೆ ಹೊಳೆಯಿತು, ಅಡುಗೆ ಮನೆಯಲ್ಲಿ ಅದರ ಪ್ರಯೋಜನ ಸಕಾಲಿಕವಾಗಿರಬಹುದು ಅಂತ ಅಲ್ಲಿ ಹೋದೆ.

ಹೋದೆನೇನೊ ನಿಜ, ಆದರೆ ಅಲ್ಲಿ ಬೇರೆ ಪ್ರಕರಣನೇ ಬೆಳೆಯಿತು. ನಾನೇನೊ ಸದುದ್ದೇಶದಿಂದ ಹೋಗಿದ್ದೇನಾದರೂ ಯಾವ ಅಧಿಕಾರದಿಂದ ಹೋಗಿದ್ದೆ ನಾದರೂ ಯಾವ ಅಧಿಕಾರದಿಂದ ಹೋಗಿದ್ದೆ ಅನ್ನೋ ಪ್ರಶ್ನದಿಂದ ಪ್ರಾರಂಭ ಆಯ್ತು ಆ ಪ್ರಕರಣ.

"ಇಲ್ಲಿ ಯಾಕೆ ಬಂದಿರಿ?" ಎಂದರು ನನ್ನವರು

"ನನ್ನ ಲೇಖ ಹುಡುಕಲಿಕ್ಕೆ" ಎಂದೆ.

"ಅಕ್ಕಿ ಬೇಯಿಸುವಷ್ಟು ಕಾವು ನಿಮ್ಮ ಲೇಖದಲ್ಲಿ ಇದೆ ಅಂತ ನನಗ್ಗೊತ್ತಿರ ಲಿಲ್ಲ."

"ಛೆ! ತಪ್ಪು ತಿಳಿಯಬೇಡ. ಬಿಸಿ ಪಾತ್ರೆ ಎತ್ತುವಾಗ ಕೈಗೆ ಅನುಕೂಲ ಅಂತ"

"ಇಲ್ಲಿ ಏನು ಯಾರ ಕೈಯ್ಯೂ ಸುಟ್ಟಿಲ್ಲ, ನಿಮ್ಮನ್ನ ಒಳಗೆ ಬಿಟ್ಟು ಕೈ ಸುಟ್ಟ ಗೊಳ್ಳೋದೂ ನನಗೆ ಬೇಕಿಲ್ಲ" ಎಂದರು.

"ನನ್ನಷ್ಟಕ್ಕೆ ನಾನು ನೋಡಿಕೊಂಡು ಹೋದರೆ–" ನನ್ನ ದನಿಯಲ್ಲಿ ಹಟ ಇದ್ದುದನ್ನು ಕಂಡು ಅಷ್ಟೆ ಹಟದಿಂದ "ನೀವಿಲ್ಲಿ ಬರೋದೇ ಬ್ಯಾಡ" ಎಂದರು ನಮ್ಮವರು.

ನನಗೆ ಆಶ್ಚರ್ಯವಾಯಿತು. ಎಂದೂ ಇಲ್ಲದ ಈ ರಭಸ ಇಂದ್ಯಾಕೆ? "ಅಲ್ಲ; ಒಳಗೆ ಬಂದ್ರೇನಾಯ್ತು?" ಎಂದೆ. "ನನಗೆಲ್ಲಾ ಗೊತ್ತಿದೆ, ನಾನೂ ಪೇಪರ್ ಓದತಾ ಇರ್ತೀನಿ. ಈ ಆಟ ಎಲ್ಲಾ ಗೊತ್ತು" ಎಂದಳು.

ನನಗೆ ಇನ್ನಿಷ್ಟು ಆಶ್ಚರ್ಯವಾಯಿತು. ನಾನು ಆಗಾಗ ಅಡುಗೆ ಮನೆಯಲ್ಲಿ ಹೋಗುತ್ತಿರುವುದು ಪೇಪರ್‌ಗಳಲ್ಲಿ ಪ್ರಕಟವಾಗಬಹುದೆಂಬ ಕಲ್ಪನೆಯೂ ನನಗಿದ್ದಿರ ಲಿಲ್ಲ, ಆ ಮಾತನ್ನು ಆಡಿಯೂ ತೋರಿಸಿದೆ.

"ಅದನ್ನ ಹೇಳಲಿಲ್ಲ, ಗಂಡಸರ ಸ್ವಭಾವ ಹೇಳಿದೆ" ಎಂದರು. "ಅಹ! ಅಷ್ಟೇನು ನೀವು ಆಶ್ಚರ್ಯ ತೋರಿಸೋ ಕಾರಣಿಲ್ಲ. ಈಗ ದೇಶದ ತುಂಬ ಇದೇ ನಡೆದಿದೆ" ಎಂದರು.

ನನಗೆ ಇನ್ನಿಷ್ಟು ಆಶ್ಚರ್ಯ. ದೇಶದ ತುಂಬ ಗಂಡಸರಲ್ಲಿ ನಿರುದ್ಯೋಗ ಬೆಳೆಯುತ್ತಿದೆ ಎಂಬುದನ್ನು ನಾನೂ ಓದಿದ್ದೆ, ಆದರೆ ಅದಕ್ಕಾಗಿ ಗಂಡಸರು ಅಡುಗೆ ಮನೆಯಲ್ಲಿ ನುಗ್ಗುತ್ತಿದ್ದಾರೆ ಎಂದು—

"ಸಾಕು ನಿಮ್ಮ ತಮಾಷೆ! ಈಗ ಲದಾಖ್‌ನಲ್ಲಿ ಏನು ನಡೆದಿದೆ? ಬೆಳಗಾವಿ ಯಲ್ಲಿ ಏನು ನಡೆದಿದೆ?" ಎಂದು ಸವಾಲನ್ನು ಹಾಕಿದರು.

ಅಲ್ಲ, ,ಎಲ್ಲಿಂದೆಲ್ಲಿಗೆ? ಲದಾಖಾನಲ್ಲಿ ಚೂಎನ್ ಲೈ ಅವರ ಪ್ರತಿಮೆ, ಬೆಳಗಾವಿಯಲ್ಲಿ ಚೆನ್ನಮ್ಮ ರಾಣಿಯ ಪ್ರತಿಮೆ.

"ಆದರೂ ನೋಡಿರಲ್ಲ? ಲದಾಖ್‌ನೊಳಗೆ ಬಂದರು ಚೀನದವರು, ಇದ್ದರು. ಇದ್ದಮೇಲೆ ಲದಾಖ್ ನಮ್ಮದು ಅಂದರು! ಬೆಳಗಾವಿಯೊಳಗೆ? ಕಮಿಷನರ ಕಚೇರಿ ಬಂತು, ಕಚೇರಿ ಕೂಡ ಕ್ಲಾರ್ಕ ಪಂತೋಜಿಯವರು ಬಂದರು, ಇದ್ದರು, ಇದ್ದಮೇಲೆ ಬೆಳಗಾವಿ ನಮ್ಮದು ಅಂದರು—"

"ಅವರು ಹಾಗಂದ್ರೇನಾಯ್ತು? ನಾವು ಬಿಡೋದಿಲ್ಲ ಅದನ್ನ" ಎಂದು ಗಂಡಸಿಗೆ ತಕ್ಕ ಆವೇಶದಿಂದಲೆ ಪ್ರತಿಭಟಿಸಿದೆ.

"ಅದನ್ನ ನನ್ನ ಮುಂದೆ ಯಾಕೆ ಹೇಳ್ತೀರಿ ಅಸೆಂಬ್ಲೀವಳಗೆ ಹೇಳಿಧಾಗೆ? ಅವರಿಂಗ್ಹೋಗಿ ಹೇಳಿರಿ ನೋಡೋಣ"? ಎಂದು ನನ್ನನ್ನು ಕೆಣಕಿದರು.

"ಹೇಳ್ತೀವಲ್ಲ? ಆದರೆ—ಯಾವುದಾದರೂ ಶಾಂತಿ—ಸಂಧಾನಗಳಿಂದಲೆ ಆಗತಕ್ಕದ್ದು ಹೊರತು—"

"ನಿಂಕರೂಡ ಶಾಂತಿಸಂಧಾನಕ್ಕೆ ತೊಡಗಿದರೆ ಮಧ್ಯಾಹ್ನ ಅಡಿಗೆ ಸಾಯಂಕಾಲಕ್ಕೇ ಮುಗಿದೀತು."

"ಅಲ್ಲ, ನಾನು ಹೇಳೋದು ಅಂದ್ರೆ—ನೋಡು, ಇಷ್ಟು ಗಲಭೆ ಆದರೂ ಪೋಲೀಸರದೂ ನಮ್ಮವರದೆ ತಲೆ ಒಡೆದಿವೆ. ಅವರ ತಲೆಗೇನಾದರೂ—"

"ಅವರಿಗೆ ತಲೇನೇ ಇಲ್ಲ, ಒಡೆಯೋದೆಲ್ಲಿಂದ ಬಂತು? ನಿಮಗೆ ತಲೆ ಇದೆಯೋ ಇಲ್ಲವೊ ಹೇಳಿರಿ."

"ಇದೆ" ಎಂದು ನಗೆಯಿಂದಲೆ ಹೇಳಿದೆ.

"ಹಾಗಿದ್ದರೆ ಅದನ್ನ ಉಳಿಸಿಕೊಳ್ಳೋದಾದರೆ ತತ್‌ಕ್ಷಣ ಇಲ್ಲಿಂದ ಹೊರಡಿ."

ನಾನು ಬೆಪ್ಪಾಗಿ ಅವರ ಮುಖವನ್ನೇ ನೋಡುತ್ತ ನಿಂತೆ.

"ಹೊರಡಿ—ಅಂದೆ! ಇಲ್ಲಿದ್ದರೆ ದಿನಾಲು ಏನಾದರೂ ನೆಪ ಹುಡುಕಿ ಅಡುಗೇಮನೆಗೆ ಬರ್‍ತಾ ಬರ್‍ತಾ ಕೊನೆಗೆ ಒಂದು ದಿನ ಅಡುಗೆಮನೇನೂ ನನ್ದು ಅಂದೀರಿ! ಹೊರಡಿ!"

ಓಹೊ! ಇದೊಂದು ತಮಾಷೆ! ತಿಳಿಯಿತು ನನಗೆ. ನಾನು ಬರೆಯುವ ಕೋಣೆಗೆ ಅವರನ್ನು ಬರಗೊಡಲು ನಾನು ಆತುರನಿರುವುದಿಲ್ಲ ಎಂಬುದಕ್ಕೆ ಪ್ರತಿಭಟನೆ ಇದು!

"ಹ ಹ! ಹೀಗೆನ್ನುವೆಯಾ? ಯಾವ ಕೋಣೆ ಆದರೇನಾಯ್ತು? ಮನೆ ಒಂದೇ ಅಲ್ಲವೆ?"

"ಅಷ್ಟು ಬುದ್ಧಿ ಗಂಡಸಿಗಿದ್ದರೆ—"

"ಬುದ್ಧಿ" ಎಂದ ಕೂಡಲೆ ತಲೆ ಜ್ಞಾಪಕಕ್ಕೆ ಬಂದು ಅದನ್ನು ಉಳಿಸಿಕೊಳ್ಳುವ ಅವಸರದಿಂದ ಹೊರಬಿದ್ದೆ.

ಉಳಿದಿದೆಯೆ ಇಲ್ಲವೆ ಎಂಬುದನ್ನು ಇದನ್ನೋದಿದ ವಾಚಕರೇ ಹೇಳಲಿ.

—ಶ್ರೀರಂಗ

" ಗೃಹಮಣಿ "

ಸ್ತಬ್ಧ, ನಿಶ್ಶಬ್ದ ಸುತ್ತಲೂ
ಮೌನ ಮುಡಿಗೆದರಿ ನಿಂತಿತ್ತು ಎತ್ತೆತ್ತಲೂ
ನಡೆಸಿದ್ದೆ ; ಅವ್ಯಾಹತ ಭಗೀರಥ ಪ್ರಯತ್ನ
ಆದರೂ ನನ್ನ ಪಾಲಿಗೆ ನಿದ್ರೆ ಬರಿಯ ಸ್ವಪ್ನ
ಅತ್ತ ! ಇತ್ತ !
ಮೈ ನವೆಯಾದ ಕತ್ತೆಯಂತೆ
ಬಂದೀತೋ, ಬಾರದೋ
ಕಂಡೇನೋ, ಕಾಣೆನೋ
ಎಂದೆಂದು ತಪಿಸಿ ಜಪಿಸಿ
ಹೊರಳಾಡುತ್ತಿದ್ದೆ ಮತ್ತೆ ಮತ್ತೆ

* * * *

ಅರೆ ನಿದ್ದೆ
ಎಲ್ಲಿಯೋ ಗಗನ ಗಾಮಿಯಾಗಿ ನಡೆಯುತ್ತಿದ್ದೆ
ಬುಳು ಬುಳು ಸದ್ದು
ಚುರು ಚುರು ಸ್ಪರ್ಶ !
ಅಯ್ಯೋ ಚುಚ್ಚಿತು !
ಏನೋ ಕಚ್ಚಿತು ?
(ಹಾಕು ಲೈಟು ಒತ್ತು ಸ್ವಿಚ್ಚು)
ಅಬ್ಬಾ ! ತಿಗಣೆ–
(ಅಲ್ಲಲ್ಲು ಪಕ್ಕಟೆಯ ಸುಚ್ಚು ಮದ್ದು)
ಹಿಡಿ, ಕಿಚುಕು
ಕೊಡಲೇ ಯಮ ಸದನಕ್ಕಟ್ಟು
ನಿಲ್ಲು ! ನಿಲ್ಲು ! ಕೊಲ್ಲದಿರು, ಕೊಲ್ಲದಿರು
ಇದು ತಿಗಣೆಯಲ್ಲು–' ಗೃಹ 'ಮಣಿ

ಎಂದೆಂದಿಗೂ ಮಾಡದಿರು ಖೂನಿ
(ತಾಳ್ಮೆ ತಾಳಿ ಕಿತ್ತೊಗೆದ ಹೆಣ್ಣಿನಂತಾಗಿತ್ತು)
ತಿಗಣೆ ಸಂತತಿಯ ವಂಶ ನಿರ್ವಂಶಗೈಯಲು
ಮನ ಪರಶುರಾಮನಂತೆ ಶಪಥ ತೊಟ್ಟಿತ್ತು.
ನಿದ್ದೆಯ ಮಬ್ಬುಗಣ್ಣಿಗೆ–ಮೋಸಗೈದು
ಮನೋವೇಗದಲ್ಲಿ ಹರಿದೆಲ್ಲೊ ಮಾಯವಾಯ್ತು.

* * * *

ಇರಲಿ ಬಿಡು–ಅದು ತಿಗಣೆಯಲ್ತು 'ಗೃಹ'ಮಣಿ
ಎಂದೆಂದಿಗೂ ಮಾಡದಿರು ಅದರ ಖೂನಿ

'ಯಚ್ಚೆಂಪಿ'

ಮಟಮಟ ಮಧ್ಯಾಹ್ನ—ಬಿಸಿಲಿನ ಝಳ
ಏನಿತು ಎಂದರೆ
ಹುಚ್ಚುನಾಯಿಗಳು ಪರದಾಡುವುವು
ಅರ್ಜಿಯ ಹಿಡಿದವರಲೆದಾಡುವರು

ಖೂನಿಗಳೆರಡನು ನಗುತಲೆಗೈಯ್ಯುವ
ಕಾಡಿನ ಕಳ್ಳನು, ಹುಳಿ ನೀರವ ಕುಡಿದು
ಬಾಯಿನ ಅಂಚಲಿ ನೊರೆಯನು ದೋರಿ
ತಿಪ್ಪೆಗೆ ಬೀಳುವ, ಹೊಂಗೆಯ ನೆಳಲಲಿ

ಬಿಸಿಕಿನ ಝಳವದು ಏನಿತು ಎಂದರೆ
ಅರ್ಜಿಯ ಹಿಡಿದವರಲೆದಾಡುವರು
ಹುಚ್ಚುನಾಯಿಗಳು ಪರದಾಡುವುವು.

* * * *

ಪರಿಪರಿಯ ವಿಳಾಸದಾರರು

" ಅವರವರ ಮನೆಗೆ ಬರುವ ಕಾಗದಗಳಿಂದ ಅವರವರ ಯೋಗ್ಯತೆ ಪತ್ತೆ ಹಚ್ಚಿಬಿಡಬಹುದು " ಎಂದಂದ ಪೋಸ್ಟ್‌ಮ್ಯಾನ್ ಅಂಚ್ಯಪ್ಪ.

" ನೋಡಿ, ಕೆಲವರಿಗೆ ಬರೀ ಕೊರೆದ ಅಕ್ಷರ ತುಂಬಿದ ಕಾರ್ಡುಗಳೇ ಬರುತ್ತವೆ. ಅವರು ಎಲ್ಲರಂತಿರುವ ಸಾಮಾನ್ಯ ಜನ. ಅವರ ಗುಟ್ಟುಗಳು ಪೋಸ್ಟಲ್ ಸಾರ್ಟರುಗಳಿಗೆಲ್ಲ ಗೊತ್ತಿರುವಂಥವು. ನಾವುಗಳು ಅವನ್ನು ಓದುವುದನ್ನು ಕೂಡ ಬಿಟ್ಟು ಬಿಟ್ಟಿದ್ದೇವೆ! ಆದರೂ ಬಲ್ಲೆವು, ಕೆಲವರು ಅದೇನೋ ಸಂಕೇತ ಇಟ್ಟು ಕೊಂಡು ಕಾರ್ಡುಗಳಲ್ಲಿಯೇ ಕಾಲ ಹಾಕುತ್ತಾರೆ. ಬರೆದಿರುವುದು ಒಂದಾದರೆ ಅರ್ಥ ಇನ್ನೊಂದು.

" ಕೌರುಗಳೇ ಬರುತ್ತವೆ ನೋಡಿ ಕೆಲವರಿಗೆ! ಅವರು ಕೊಂಚ ಜಬರ್ದಸ್ತಿನವರು. ಅವರಿಗೆ ಬರೆಯುವವರು ಆರ್ತತೆಯಿಂದ ಬರೆಯುವವರು. ಇಲ್ಲವೇ, ಸರ್ಕಾರಿ ಕಾಗದಗಳು.

" ಗಾಳೀಪತ್ರ ಈಗಂತೂ ಬಹಳವಾಗಿಬಿಟ್ಟಿವೆ. ಅವು ಕಾರ್ಡೂ ಅಲ್ಲ, ಕೌರೂ ಅಲ್ಲ, ಚೀಪೂ ಹೌದು, ಗೋಪ್ಯವೂ ಹೌದು. ಗಾಳಿ ಪತ್ರ ಬರೆಯುವ ಜನ, ಇಂಟರ್ ಕ್ಲಾಸಿತ್ತಲ್ಲ ರೈಲಲ್ಲಿ, ಅಂಥ ಜನ. ಕಾರ್ಡಿಗಿಂತ ಹೆಚ್ಚು ವಿಷಯವಿರುತ್ತೆ ಬರೆಯೋಕೆ. ಕೌರಿಗೆ ಖರ್ಚು ಮಾಡಲು ಮನಸ್ಸು ಬಾರದು. ಗಾಳಿಯಲ್ಲಿ ವೇಗವಾಗಿ ತೂರಿಕೊಂಡು ಹೋಗಲು ಎಷ್ಟಕ್ಕೆಷ್ಟು? ಆದರೆ ಪೋಸ್ಟ್‌ಮೆನ್ನುಗಳಿಗೆ ಅದನ್ನು ಮುಟ್ಟಲು ಕೊಂಚ ಅಸಯ್ಯ. ' ಏನೋ ಹೋಗಲೀ ' ಅಂತ ವಿಳಾಸ ದಾರರಿಗೆ ತಲುಪಿಸಿಬಿಡುತ್ತೇವೆ ಅಷ್ಟೆ.

" ಇನ್ನೂ ಕೆಲವರಿಗೆ ಬುಕ್‌ಪೋಸ್ಟ್‌ಗಳೇ ಹೆಚ್ಚಾಗಿ ಬರುತ್ತಿರುತ್ತವೆ. ಕಾರಣ ಇವರು ಮ್ಯಾಗಜೀನ್ ಕೂಪನ್‌ಗಳನ್ನು ಕತ್ತರಿಸಿ ರವಾನಿಸುತ್ತಿರುತ್ತಾರೆ. ಬರುತ್ತವೆ, ವ್ಯಾಪಾರ ಪತ್ರಗಳು, ಬುಕ್‌ಪೋಸ್ಟಿನಲ್ಲಿ ಪುಸ್ತಕದ ಪಟ್ಟಿಗಳು, ವಿವಿಧ ಔಷಧದ ವರ್ಣನೆಗಳು; ಪೋಸ್ಟ್ ಮೂಲಕವೇ ನಿಮಗೆ ರೇಡಿಯೋ ಸೆಟ್ಟನ್ನು ಮನೆಯಲ್ಲಿಯೇ ನಿರ್ಮಾಣ ಮಾಡುವುದಕ್ಕೆ ಹೇಳಿ ಕೊಡುವ, ಮನೆಯಲ್ಲಿ ಟೈಪುರೈಟರಿಲ್ಲದೆಯೇ ಟೈಪು ಮಾಡುವುದನ್ನು ಕಲಿಸುವ, ಕಡಕಟ್ಟಕಡ ಎಂದು ಟೆಲಿಗ್ರಾಂ ಬಡಿಯುವುದನ್ನು ಕಲಿಸುವ ಶಿಕ್ಷಣ ಪದ್ಧತಿ ಮುಂತಾದುವುಗಳ ಪ್ರವೇಶ ಪತ್ರಗಳು, ಇಂಥವು ತುಂಬಿರುತ್ತವೆ.

"ಕೆಲವರಿಗೆ ಪರದೇಶಗಳಿಂದ ಪತ್ರ ಬರುತ್ತಿರುತ್ತವೆ. ಹಂಚುವುದಕ್ಕೇ ಮನಸ್ಸು ಬಾರದಷ್ಟು ಆಕರ್ಷಿಕವಾಗಿರುತ್ತವೆ. ಆದರೆ ನಾವುಅಷ್ಟು ಚಿಲ್ಲರೆ ಜನವಲ್ಲ! ತಲುಪಿಸಿ ಬಿಡುತ್ತೇವೆ, ಸ್ಟಾಂಪು ಸಮೇತ."

"ಕೆಲವರಿಗೆ ಪರದೇಶಗಳಿಂದ ಬಣ್ಣ ಬಣ್ಣದ ಕ್ಯಾಲೆಂಡರುಗಳು ಬರುತ್ತವೆ ನೋಡಿ! ಹೊಟ್ಟೆ ಕಿವುಚಿಕೊಂಡು ವಿಳಾಸದಾರರಿಗೆ ತಲುಪಿಸಬೇಕಾಗುತ್ತೆ. ವಿಳಾಸದಾರರು ಸಿಕ್ಕದಿದ್ದರೆ ಮಾತ್ರ, ನಾವು ಅದನ್ನು ಪರದೇಶಕ್ಕೆ ವಾಪಸು ರಪ್ತು ಮಾಡುವುದಿಲ್ಲ; ಅಂತೂ ಏನೋ ಮಾಡುತ್ತೇವೆ!

"ಭಾಂಗಿಗಳು ಬರುತ್ತವೆ ಕೆಲವರಿಗೆ, ಇನ್ಶ್ಯೂರೆನ್ಸ್ ಮಾಡಿದ ಕಾಗದಗಳು ಬರುತ್ತವೆ. ಇಂಥವರಿಗೆ ಕಾರುಬಾರು ಹೆಚ್ಚು, ಇವರದು ಬಲು ಗಡಿಬಿಡಿ. ಸರ್ಕಾರಿ ಆಫೀಸಿಗೆ ಇವೆಲ್ಲ ಬಂದರೆ ಏನೊಂದೂ ಯೋಚಿಸದೆ ಕೊಟ್ಟುಬಿಡುತ್ತೇವೆ. ಆದರೆ ಮನೆಯಲ್ಲೇ ಕುಳಿತಿರುವಂಥ ಶ್ರೀಮಂತರಿಗೆ ಇವೆಲ್ಲ ಬರುವುದನ್ನು ನೋಡಿದರೆ ನಾವು-ನಾವು ಮಾತನಾಡಿಕೊಳ್ಳುತ್ತೇವೆ· 'ಅತ್ತೆ ಮನೆಯವರು ಕಳಿಸಿರುವ ಉಡುಗರೆಯೇ?' ಅಹಮದ್ ದವಾಖಾನೆಯಿಂದ ಬಂದಿರುವ ಜಾಫ್ರಾನ್ ಲೇಹವೇ? ಆಯುರ್ವೇದಾಲಯದಿಂದ ಬಂದಿರುವ ಚ್ಯವನಪ್ರಾಶವೇ? ಜಲಂಧರಿನಿಂದ ಬಂದಿರುವ ರಬ್ಬರ್ ರೆಯ್ನ್‌ಕೋಟೇ? ಅಫೀಮೇ? ಹೂವಿನಗಿಡದ ಬೀಜಗಳೇ? ಈಜುವ ಚಡ್ಡಿಯೇ?' ಎಂದೆಲ್ಲ ತರ್ಕ ಮಾಡಿಕೊಳ್ಳುತ್ತೇವೆ. ಕೆಲವು ವಿದೇಶದ ಪಾರ್ಸಲುಗಳಂತೂ ಕಸ್ಟಂನವರಿಂದ ಒಡೆಯಲ್ಪಟ್ಟು ಪುನರ್ಮುದ್ರಿತವಾಗಿ, ಬರೆ ಹಾಕುವಂತಹ ಸುಂಕ-ಪಟ್ಟಿಯ ಸಮೇತ ಬರುತ್ತವೆ. ವಿಳಾಸದಾರ ಸುಂಕದ ವಸೂಲಿಪಟ್ಟಿಯನ್ನು ಕೈಗೆ ತೆಗೆದುಕೊಂಡು ಕೋಪದಿಂದ ಕೆಂಚಗಾಗುವಾಗ ನಮಗೆ ಕೊಂಚ ಸಂತೋಷವೇ. ಏನೋ ಒಂದು ಪದಾರ್ಥವನ್ನು ಕ್ಯಾಲಿಫೋರ್ನಿಯಾದಿಂದ ತರಿಸಿಬಿಟ್ಟಿರುತ್ತಾನೆ, ಭೂಪತಿ. ಅಥವಾ ಅಲ್ಲಿರುವ ಇವರ ಸ್ನೇಹಿತರು ಕಳಿಸಿಬಿಟ್ಟಿರುತ್ತಾರೆ. ಒಂದು ನೈಲಾನ್ ನೆಕ್‌ಟೈಯೋ ಅಥವಾ ಒಂದು ಗ್ರಾಮಾಫೋನ್ ಗಾನದೋಸೆಯೋ ಬಂದಿರುತ್ತೆ. ಕಸ್ಟಂನವರು ಹಾಕಿರುತ್ತಾರೆಅದಕ್ಕೆ ಎಪ್ಪತ್ತೊಂಬತ್ತು ರೂಪಾಯಿ ತೊಂಬತ್ತೊಂಬತ್ತು ನಯೇಪೈಸೇ ಸುಂಕಾ! ಸ್ನೇಹಿತ 'ಹ್ಯಾರಿ' ಕಳಿಸಿದ್ದನ್ನು ನಿರಾಕರಿಸುವುದೇ? ಖಂಡಿತ ಇಲ್ಲ. ಅಂತೂ ಕಸ್ಟಂನವರನ್ನು ಬೈದುಕೊಂಡು ಪೋಸ್ಟಿನವರಿಗೆ ಹಣ ತೆರುವುದನ್ನು ನೋಡುವಾಗ ನನ್ನಂಥವರಿಗೆ ಅದೇನೋ ಆನಂದ (ನಾನೇನೂ ಹುಟ್ಟು-ಕೆಟ್ಟವನಲ್ಲ)!

"ಅಂತೂ ನಾವು ಮನೆಯಿಂದ–ಮನೆಗೆ ಹೋಗುವ ಕಸಬಿನವರು. ಆ ಮನೆಗಳ ಜನರ ಮರ್ಮಗಳೆಲ್ಲ ಕ್ರಮೇಣ ಕಂಡುಬಂದು ಕಣ್ಣಿಗೆ ಮೆತ್ತಿಕೊಂಡರೆ ಅದು ನಮ್ಮ ತಪ್ಪೇ?

" ಈಚೀಚೆಗೆ ಒಂದು ಬದಲಾವಣೆ ಆಗಿಬಿಟ್ಟಿದೆ. ಹಿಂದೆ ಬರುತ್ತಿದ್ದುವಲ್ಲ ಸುಗಂಧದ ಕಾಗದಗಳು, ಅವು ಈಗ ತೀರ ಕಡಿಮೆಯಾಗಿಬಿಟ್ಟಿವೆ. ಮೊನ್ನೆ ಒಬ್ಬ ಸೊಗಸುಗಾರರಿಗೊಂದು ಅಂಥ ಕಾಗದ ಬಂತು ನೋಡಿ. ಮನಸ್ಸು ತಡೆಯಲಾಗಲಿಲ್ಲ, ಅದನ್ನು ಒಡೆದು ನೋಡುವ ತನಕ. ಟೇಪಾಟಿನ ಆವಿ ಬಿಟ್ಟು ಗೋಂದಿನ ಮುಚ್ಚಳ ಸಡಿಲ ಮಾಡಿ ಒಳಗಿದ್ದ ಕಾಗದ ಓದೇಬಿಟ್ಟೆ. ಅದರಲ್ಲಿ ಹೀಗಿಷ್ಟೇ ಬರೆದಿತ್ತು.

" ' ನನ್ನನ್ನು ಮರೆತುಬಿಟ್ಟಿರಾ ?

ಇತಿ ನಿಮ್ಮ

ಚಿನ್ನದ ಜೇಳು ! ' ಎಂದಿತ್ತು ! "

—ಡೂನು



ಒಂದು ಅರ್ಜಿ ಕೊಟ್ಬಿಡಿ

"ಇಲ್ನೋಡಿ, ನೀವು ಮಾಡಬೇಕಾದ್ದು ಇಷ್ಟೆ, ಅಮಲ್ದಾರ್ರಿಗೆ ಒಂದು ಅರ್ಜಿ ಮಾಡಿ-ಏನಂದ್ರಿ, ಕೈಬರಹದಲ್ಲೇ ಎಂದೆ? ಹೌದು ನೀವು ಅರ್ಜಿ ಬರೆದುಕೊಟ್ರಿ ಅವರು ಒಂದು ಪ್ರಿಂಟೆಡ್ ಫಾರ್ಮು ಕೊಡ್ತಾರೆ, ನೀವು ಅದನ್ನ ಡೂಪ್ಲಿಕೇಟ್ ಮಾಡ್ಸಿ ಭರ್ತಿ ಮಾಡಿಸಿ ಕೊಡಿ, ಏನು, ಅಮಲ್ದಾರ್ರೇ ಸ್ಯಾಂಕ್ಸನ್ ಮಾಡ್ತಾರಾ ಅಂತ ಕೇಳಿದ್ರಾ? ಹಾಗಲ್ರೀ, ಅವರು ಆ ಅರ್ಜಿನ ಡೆಪ್ಯುಟಿ ಕಮೀಷಿನರಿಗೆ ಕಳಿಸ್ತಾರೆ ಕಮೀಷನರ್ರು ಆ ಅರ್ಜಿನ ಮತ್ತೆ ನಿಮ್ಮ ಡಿಪಾರ್ಟ್‌ಮೆಂಟಿಗೆ ಕಳಿಸ್ತಾರೆ. ಆ ಡಿಪಾರ್ಟ್‌ಮೆಂಟ್‌ನವರೇ ಹಣ ಕೊಡ್ತಾರಾ ಅಂತ ಕೇಳ್ತೀರೆನ್ರೀ ಹಾಗಲ್ರೀ, ನಿಮ್ಮ ಡಿಪಾರ್ಟ್‌ಮೆಂಟಿ ಹೆಡ್ ಅಪ್ಪಣೆ ಇಲ್ದೆ ಕಮೀಷನರ್ ಆ ಅರ್ಜಿ ಇತ್ಯರ್ಥ ಮಾಡುವುದು ಸಾಧ್ಯ ಇಲ್ಲ. ಈಗ ಸ್ವಲ್ಪ ನಿಮ್ಮ ಡಿಸ್ಟ್ರಿಕ್ಟ್ ಆಫೀಸಿಗ್ಹೋಗಿ ಸ್ವಲ್ಪ ಆ ಹೆಡ್ ಕ್ಲಾರ್ಕ್‌ನ ಮಾತಾಡಿಸಬೇಕು ಇಲ್ದಿದ್ರೆ ನಿಮ್ಮ ಹಣ ಬರುವುದೇ ಕಷ್ಟ ಆಗ್ತದೆ. ನಿಮ್ಮ ಆಫೀಸರ್ ಅದರ ಮೇಲೆ ಷರಾ ಬರೆದು ಅರ್ಜೀನ ಮತ್ತೆ ಡಿಸ್ಟ್ರಿಕ್ಟ್ ಆಫೀಸಿಗೆ ಕಳಿಸ್ತಾರೆ. ಅಲ್ರೀ ನೀವೇನು ಏಳನೇ ತಿಂಗಳಲ್ಲಿ ಹುಟ್ಟಿದ್ರೇನ್ರೀ, ಡಿ. ಸಿ. ಯವರೇ ಹಣ ಕಳಿಸ್ತಾರಾ, ಅಂತೀರಲ್ಲ? ಅವರಿಗೆ ಈಗ ಅಷ್ಟು ಪವರ್ ಇಲ್ರಿ, ಅವರು ಅರ್ಜೀನ ಡಿವಿಷನಲ್ ಕಮೀಷನರ್‌ಗೆ 'ಫಾರ್ವರ್ಡ್' ಮಾಡ್ತಾರೆ. ಅಲ್ಲಿಂದ ಅದು ವಿಧಾನ ಸೌಧಾಕ್ಕೆ ಹೋಗ್ತದೆ. ಈಗ ನೀವು ಸ್ವಲ್ಪ ಶ್ರಮ ವಹಿಸ್ಬೇಕು. ನೀವೇ ಖುದ್ದು ಬೆಂಗಳೂರಿಗೆ ಹೋಗಬೇಕು. ವಿಧಾನಸೌಧದಲ್ಲಿ ಮಂತ್ರಿಗಳ P. A.ನ ಭೆಟ್ಟಿ ಆಗ್ಬೇಕು. ಯಾವ ಮಂತ್ರಿಗಳು ಅಂತೀರಾ? ಅಷ್ಟು ಗೊತ್ತಾಗೊದಿಲ್ವಲ್ರೀ, ನಿಮ್ಮ ಡಿಪಾರ್ಟ್‌ಮೆಂಟ್ ಯಾರ ಕೈಯಲ್ಲಿವೆಯೋ ಆ ಮಂತ್ರಿಗಳನ್ನ, ಅಲ್ಲದೆ ಇದು ಹಣದ ವಿಷಯ ನೋಡಿ ಆದುದರಿಂದ ಹಣಕಾಸಿನ ಮಂತ್ರಿಗಳ್ನೂ ಭೆಟ್ಟಿಯಾಗೋದು ಒಳ್ಳೆಯದು. ನಿಮ್ಮ ಮಂತ್ರಿಗಳು ಈ ಹಣವನ್ನೂ ಬಡ್ಜೆಟ್‌ನಲ್ಲಿ ಸೇರಿಸಿ, ಹಣಕಾಸಿನ ಮಂತ್ರಿಗಳಿಗೆ ಅರ್ಜಿ ಫಾರ್ವರ್ಡ್ ಮಾಡ್ತಾರೆ. ಬಡ್ಜೆಟ್ ಸೆಶನ್ ಆದ ಮೇಲೇನೆ ಅದು ನಿಮ್ಮ ಕೈಯ್ಯಿಗೆ ಬರೋದು. ಏನು, ಮನಿಆರ್ಡರ್ ಮಾಡ್ತಾರಾ ಅಂತ ಕೇಳಿದ್ರಾ?-ಮಂತ್ರಿಗಳ ಆಫಿಸ್ನಿಂದ ಹೇಗ್ರಿ ಹಣ ಕಳಿಸ್ತಾರ್ರೀ ಅಷ್ಟು ಹೊಳೆಯಲ್ವೇನ್ರೀ ನಿಮಗೆ. ಅವರು 'ಸ್ಯಾಂಕ್ಷನ್' ಅಂತ ಅರ್ಜಿ ಮೇಲೆ ಬರೆದು ಡಿವಿಷನಲ್ ಆಫಿಸಿಗೆ ಕಳಿಸ್ತಾರೆ, ಅಲ್ಲಿಂದ ಮತ್ತೆ ಅದು D. C. ಗಳಿಗೆ ಬರ್ತದೆ.

ಡಿ. ಸಿ. ಯವರು ನಿಮ್ಮ ಆಫೀಸಂಗೆ ಕಳಿಸ್ತಾರೆ. ಅಲ್ಲಿಂದ ಮತ್ತೆ ಅದು ತಾಲ್ಲೂಕ್ ಆಫೀಸಿಗೆ ಬರ್ತದೆ. ಅಲ್ಲಿಂದ ನಿಮಗೆ ಒಂದು ' ಚಲನ್ ' ಬರ್ತದೆ. ಏನೂ ತಾಲ್ಲೂಕ ಟ್ರೆಷರೀಲಿ ಕ್ಯಾಶ ಮಾಡಿಸಬೇಕಾ ಅಂತೀರಾ ? ಆ ಕಾಲ ಆಗ್ಹೋತ್ರೀ ಈಗ ನೀವು ಆ ಚಲನ್ ತೊಗೊಂಡು ಸ್ಟೇಟ್‌ಬ್ಯಾಂಕಿಗೆ ಹೋದ್ರೆ, ಅಲ್ಲಿ ನಿಮ್ಮ ಇಪ್ಪತ್ತೈದು ರೂಪಾಯಿಗಳ್ನ ಕೊಡ್ತಾರೆ. ತಿಳೀತಲ್ಲಾ, ನೀವು ಮಾಡಬೇಕಾದ್ದು ಇಷ್ಟೆ ಅಮಲ್ದಾರ್ರಿಗೆ ಒಂದು ಅರ್ಜಿ ಕೊಟ್ಬಿಡಿ !

ಎ. ಆರ್. ವಾಮನರಾವ್

ಬೇರೆ ಬೇರೆ ಲೆಕ್ಕಗಳನ್ನು
ಬರೆಯುವೆವು ನಾವು–ದಂಪತಿಗಳು
ಚಿಕ್ಕಪುಟ್ಟ ಖರ್ಚಿನ ಲೆಕ್ಕ
ಹೆಚ್ಚಿನ ಸಾಲದ ಲೆಕ್ಕವನೆಲ್ಲಾ
ತಿಂಗಳ ಅಂತ್ಯದಿ ಲೆಕ್ಕವ ನೋಡಿ
ಸರಿದೂಗಿಸುಳವಳು—ಬಲು ಹುಷಾರಿ
ಖರ್ಚುಗಳೆಲ್ಲಾ ನನ್ನ ಲೆಕ್ಕಕ್ಕೆ
ಮಿಕ್ಕಿದುದೆಲ್ಲಾ ಅವಳ ಲೆಕ್ಕಕ್ಕೆ

* * * *

ಹೊಸದಾಗಿ ಮದುವೆಯಾದವರು ಹುಲಿ ಕುರಿ ಆಟ ಆಡಿದಾಗ, ಮೂರು ಸರ್ತಿ ಓದಿದ ಹೆಂಡತಿ ಗೆದ್ದಳಂತೆ. "ಎಲ್ಲೀ ಕಲಿತೆ ಈ ಆಟಾನ" ಎಂದು ಗಂಡ ಕೇಳಿದಾಗ "ಕಾಲೇಜಲ್ಲಿ ಗಣಿತದ ಪಾಠಹೇಳ್ತಿದ್ದಾಗ ಇದೇ ಆಟ ನಾವು ಆಡ್ತಿದ್ದುದು, ಕಡೆ ಬೆಂಚಿನ ಮೇಲೆ" ಎಂದಳಂತೆ ಓದಿದ ನವವಧು !

ಕೇಳಿದವನಿಗೆ ಬಲು ಮಧುವಾಗಿತ್ತಂತೆ ಸೋತಿದ್ದು !

* * * *

ದೊಡ್ಡ ಗಂಟಲಿನ ಜಗಳಗಂಟಿ ಜಾನಕಿ ಗಂಡನ ಮೇಲೆ ರೇಗಿ ತೌರಿಗೆ ಹೋದಮೇಲೆ, ದಿನಕ್ಕೊಂದು ಕಾಗದ ಬರಲು ಶುರುವಾಯ್ತಂತೆ. ಅವಳಿಗೆ ಆಶ್ಚರ್ಯವಾಗುವಂತಹ ಒಂದೇ ರೀತಿಯ ಕಾಗದಗಳಂತೆ—

"ತೌರಿನಲ್ಲೀ ತುಂಬಾ ದಿನ ಇರಿ. ಮನೆ ರಸ್ತೆ ಕೇರಿ ಎಲ್ಲಾ ಈಗ ಶಾಂತ ವಾಗಿದೆ" ಅಂತ. ಬರೆದವರು—ನೆರೆಹೊರೆಯವರಂತೆ.

ಆರು ಫರ್ಲಾಂಗ್ 'ಡ್ಯಾಷ್'

ಕ್ರಿಕೆಟ್ ವ್ಯಸನ ಇನ್ನು ನನಗಿಲ್ಲ. ಏನು ಬಂತು! ಯಾಕಾಡಬೇಕು? ಮೈಸೂರಿನ ಹುಡುಗರು ರಾಂಜಿಟ್ರೋಫಿ ಫೈನಲ್ಸ್‌ನಲ್ಲಿ ಆಡಿದರೂ, ಟೆಸ್ಟ್, ರೆಸ್ಟ್, ರಿಟ್ರೀವರ್ಸ್ ಟೀಮುಗಳೊಂದರಲ್ಲೂ ಜಾಗ ಪಡೆದಿಲ್ಲ. ಸಲೀಂದುರಾನಿ, ರುಸಿಸುರ್ತಿ, ಫರೂಕ್ ಎಂಜಿನಿಯರುಗಳ ಲಕ್ಕು ಕಸ್ತೂರಿ, ಕಿಟ್ಸಾಮಿ, ನಜರೆತ್ ಆಳ್ವಾಗಳಿಗಿಲ್ಲ. ಯಾರನ್ನು ಬೈದು ಏನು ಪ್ರಯೋಜನ ತಲೆಯಿಲ್ಲದವರ ಕಾಲ ಇದು!

ಹೋಗಲಿ, ನನಗಾದರೂ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಭಾರತ ತಂಡದಲ್ಲಿ ಜಾಗ ಸಿಕ್ಕೀತೇ! ಇಲ್ಲ ಎಂಬುದೇ ಖಚಿತವಾದ ಉತ್ತರ. Six Furlong dash ನಲ್ಲಿ ನನ್ನ ಸರಿಸಮಾನರು, ಬೇಡ-ನನ್ನ ಗ್ರೇಡಿನಲ್ಲಿರುವವರು ವಿಶ್ವದಲ್ಲಿ ಯಾರಿದ್ದಾರೆ? ಇಲ್ಲ ಎಂಬುದೇ ಇದಕ್ಕೂ ಉತ್ತರ.

ಫೆಬ್ರವರಿ 18ರಂದು ಆಗಬೇಕಾಗಿದ್ದ ನಮ್ಮ ಸ್ಕೂಲ್ ಇನ್ಸ್‌ಪೆಕ್ಷನ್ ಮಾರ್ಚ್ 18ಕ್ಕೆ ಮುಂದೆ ಬಿತ್ತು. ಆ ದಿವಸ ನಾನೇ ಇನ್‌ಛಾರ್ಜ್ ಹೆಡ್ಮಾಸ್ಟರು ಹದಿನೇಳನೇ ತಾರೀಖು ಸೆಕೆಂಡ್‌ಷೋ 'ಬಂಡಲ್ ಆಫ್ ಜಾಯ್' ನೋಡುತ್ತಾ ಥಿಯೇಟರ್ ಜಿಬ್ರಾಲ್ಟರಿನಲ್ಲಿ ಕುಳಿತಿದ್ದೆ. ರಾತ್ರಿ ನಿದ್ರೆ ಬಂದಾಗ ಎರಡುಗಂಟೆ. ಎಚ್ಚರವಾದಾಗ ಏಳೂಕಾಲು. ಏಳೂವರೆಗೆ ಶಾಲೆಯ ಆರಂಭ. ಏಳೂ ಇಪ್ಪತ್ತಕ್ಕೆ ಶಾಲೆಯಲ್ಲಿ ನಾನು ಹಾಜರಿರಬೇಕು.

ಎದ್ದೆ. ಹದಿಮೂರು ಪಾಯಿಂಟ್ ಏಳು ಸೆಕೆಂಡೇ ಸಾಕಾಯ್ತು ಹಾಸಿಗೆ ಸುತ್ತಲು. ಪ್ರಾತಃಕರ್ಮಗಳನ್ನು ಮುಳುಗಿಸಿ ಮುಖ ತೊಳೆದು ಬಟ್ಟೆ ಹಾಕಿಕೊಂಡು ಮನೆ ಬಿಟ್ಟಾಗ 7 ಗಂ. 23.5 ನಿ. ಆರಂಭವಾಯಿತು ನನ್ನ ನಡಿಗೆ. ಓಡಲಿಲ್ಲ. ಸತ್ಯಕ್ಕೆ ಮುಖ ತಿರುಗಿಸುವವನಲ್ಲ ನಾನು. ಪರಿಸ್ಥಿತಿಯನ್ನು ಗಂಭೀರವಾಗಿ ಎದುರಿಸುತ್ತೇನೆ. ನಾನು ಸ್ಥಿತಪ್ರಜ್ಞ ಎಂದು ನಿಮಗೆ ತಿಳಿದಿದ್ದೀತು.

ಸ್ವಪ್ನಸುಂದರೀ ಸರ್ಕಲಿಗೆ ಅರ್ಧ ಫರ್ಲಾಂಗ್ ದೂರದಲ್ಲಿ ನನ್ನ ರೂಮು. ಅಲ್ಲಿಂದ ಸರ್ಕಲಿಗೆ ಬಂದು, ಸಂಪಿಗೆ ರಸ್ತೆಯಲ್ಲಿ ನುಗ್ಗಿ ಸಿನ್‌ಸಿನ್ನಾಟಿ ಸರ್ಕಲ್ ರೆಸ್ಟೋರೆಂಟಿಗೆ ನುಗ್ಗಿದೆ. ಅಲ್ಲಿ ಕಾಫಿ ಬಸಿದೆ. ನಾನು ಮುಂದೆ ನುಗ್ಗಿದುದೇ

ನೂರು ದೊಂಬಿ ರಸ್ತೆ. ಲೆವಲ್‌ಕ್ರಾಸ್ ಗೇಟು ಮುಚ್ಚಿತ್ತು. ಅದರಲ್ಲಿ ನುಸಿದು ಸಿಗರೇಟು ಅಂಗಡಿಗೆ ನುಗ್ಗಿದೆ. ಸಿಗರೇಟು ಹಚ್ಚಿಕೊಂಡು ರಸ್ತೆಗಿಳಿದೆ. ಅಲ್ಲಿ ಅಷ್ಟು ಹೊತ್ತಿಗಾಗಲೇ ಟ್ರಾಫಿಕ್ ಜ್ಯಾಂ ಆಗಿತ್ತು. ರಸ್ತೆಯ ನಡುವೆ ಶನಿದೇವರ ಭಕ್ತನೊಬ್ಬನು

ನಿಮ್ಮ ಧರ್ಮವೆಲ್ಲಿದೆ ತೋರಿಸಿರಿ

ಬೀಡಿ ಸಿಗರೇಟು ಸೇದುತ್ತೀರಿ
ಕಾಫಿ ಟೀ ಕುಡಿಯುತ್ತೀರಿ
ಸಿನಿಮಾ ನೋಡುತ್ತೀರಿ
ಬಟ್ಟೆಗೆ, ಸ್ನೋ ಪೌಡರಿಗೆ,
ಹಾಳು ಮೂಳಿಗೆ ಹಣ ಸುರಿಯುವಿರಿ
ಸತ್ಯ ಬಾಹಿರರೇ
ಧರ್ಮ ವಿಹೀನರೇ
ನಿಮ್ಮ ಕಳಂಕಗಳನ್ನು ನೀಗುವುದೆಂದು ?

ಎಂದು ಬರೆದು ಅದರ ಮೇಲೆ ಮಲಗಿದ್ದ-ಚುಟ್ಟಾ ಸೇದುತ್ತಾ! ಹಾಗಾಗಿ ಒನ್‌ವೇ ರಸ್ತೆಯಾದ ಅದರಲ್ಲಿ ನಾಲ್ಕು ಕಡೆಗಳಿಂದ ಜನ ನುಗ್ಗುತ್ತಿದ್ದರು. ಲಾರಿಗಳು ಗರ್ಜಿಸುತ್ತಾ ನಿಂತಿದ್ದವು, ನಾನು ನೇರವಾಗಿ ಹೋಗಿ ಆ ಭಕ್ತನ ಗಡ್ಡ ಹಿಡಿದೆತ್ತಿ ನಿಲ್ಲಿಸಿದೆ. 'ಎಲೋ ನಗರ ಪೀಡಕಾ! ನಿನ್ನ ಧರ್ಮವೆಲ್ಲಿದೆ ತೋರಿಸು' ಎಂದು ತಿಪರಾಕಿ ಬಿಗಿದು, ಫುಟ್‌ಪಾತಿಗೆ ದೂಡಿ ನನ್ನ ಧಾವತಿಯನ್ನು ಮುಂದುವರಿಸಿದೆ. ಗಂಟೆ ಎಷ್ಟಾಗಿತ್ತೋ ನೋಡುವಾ ಎಂದು ವಾಚ್ ನೋಡಿದರೆ 7 ಗಂ. 28.5 ನಿ. ನಡೆದೆ ನಡೆದೆ. ಶಾಲೆ ಇನ್ನು ಮೂವತ್ತು ಗಜವಿತ್ತು ಚಾಕೇಪೇಟೆ ಚಾಕಿಗೆ ನುಗ್ಗಿದೆ. ಅಷ್ಟರಲ್ಲಿ ಸೈಕಲ್ಲೊಂದು ನನ್ನ ಹೊಟ್ಟೆಯೊಳಕ್ಕೆ ನುಗ್ಗಿತು. ಧೊಪ್ಪನೆ ಬಿದ್ದೆ. ಸವಾರ ಮುಖವಡಿಯಾಗಿ ಬಿದ್ದಿದ್ದ. ಬಟ್ಟೆಯೇ ಹೇಳಿತು: ಇವರೇ ಇನ್ಸ್‌ಪೆಕ್ಟರು. ಸ್ಫೂರ್ತಿ ಬಂತು. ಕೈಚಾಚಿ ಗಾಲಿಯ ಹವಾ ಹೊರಬಿಟ್ಟು, ಎದ್ದು ಧೂಳು ಕೊಡವಿ ಕೊಂಡು ಹೊರಟು ಶಾಲೆಯ ಕಚೇರಿಗೆ ತಲುಪಿದಾಗ 7 ಗಂ. 30 ನಿ. 'ಹೊಡೆಯೋ ಸೆಕೆಂಡ್ ಬೆಲ್ಲು' ಎಂದು ಆಜ್ಞೆ ಮಾಡಿದೆ. ಹೀಗಾಗಿ 6 ನಿ. 30 ಸೆ.ಗಳಲ್ಲಿ ನಾನು ಆರು ಫರ್ಲಾಂಗ್ ನಡೆದೆ. ಜೋರಾಸಿಂಗನಿಗಾಗಲಿ ಜೋಟೊ ಪೆಕ್ಕನಿಗಾಗಲೀ ಇದು ಸಾಧ್ಯವೇ?

ಮುಳ್ಳು ಪಲ್ಲಕ್ಕಿಯಂತಿರುವ ಮೊಳೆ ತುಂಬಿದ ಚಪ್ಪಲಿ, ಐದೂ ಮುಕ್ಕಾಲಡಿಯ ದೇಹಕ್ಕೆ ನೂರುಪೌಂಡ್ ತೂಕ, ಕಾಫಿ ಸಿಗರೇಟೇ ಮುಖ್ಯಾಂಶವಾದ ಆಹಾರ, ತೂತು ಜರಡಿಯಂತಿರುವ ಟಾರ್‌ರಸ್ತೆಗಳು, ಮಧ್ಯೆ ಶಾಖಿ, ಟ್ರಾಫಿಕ್ ಜಾಂ, ಡಿಕ್ಕಿ ಎಲ್ಲ ಇರುವ ಈ ಪಥದಲ್ಲೇ ಆರೂವರೆ ನಿಮಿಷಕ್ಕೆ ಆರು ಫರ್ಲಾಂಗ್

ನಡೆದ ನನ್ನ ಈ ರೆಕಾರ್ಡ್‌ನ್ನು ಯಾವ ತಿಂದು ಕೊಬ್ಬಿದ ಅಥಲೀಟ್ ಮುರಿಯಲು ಸಾಧ್ಯ. ಇದೇ ರಸ್ತೆಯಲ್ಲಿ ಈ ಕಾಲದಲ್ಲಿ ಸೈಕಲ್ಲಿನ ಮೇಲೆ ಹೋಗಲು ನಿಮಗೆ ಸಾಧ್ಯವೇ ? ಬೆಟ್ ಕಟ್ಟಿ !

ನಾನು ಈಗ ಕಾಕಾ ಹೊಡೆದು 'ಸ್ಪರ್ಧೆಗಳಲ್ಲಿ ಭಾಗವಹಿಸಲು ನನ್ನನ್ನು ಪರೀಕ್ಷಿಸಿ ಆಯ್ಕೆ ಮಾಡಿ' ಎಂದು ಬಾಯ್ತೆರೆದು ಬೇಡಲೇ ? ಸದ್ಗುಣಿಯಾದ ಯಾರು ತಾನೇ ಸ್ವಪ್ರಶಂಸೆ ಮಾಡಿಕೊಳ್ಳುತ್ತಾನೆ. ನನಗೇನು ಸ್ವಾಭಿಮಾನವಿಲ್ಲವೇ ?

ನಿನ್ನ ಈ ಅಪೂರ್ವ ಸಾಧನೆಗೆ ಯಾವ ವ್ಯಾಯಾಮ ಸಹಕಾರಿಯಾಯಿತು ? ನಿಮ್ಮ ಈ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ಜ್ಞಾನಕ್ಕೆ ಮುಕ್ತ ದ್ವಾರವಿರಬೇಕು ಎಂಬುದು ನನ್ನ ಅಭಿಪ್ರಾಯ ಹಾಗೆ ಹೇಳಿಕೊಳ್ಳುವುದು ಮರ್ಯಾದೆಯಲ್ಲವಾದರೂ, ನಿಮಗೆ ತಿಳಿದಿರಲಿ ಎಂದು ಹೇಳುತ್ತೇನೆ. ಕವನ ಬರೆಯುವ ಕೆಟ್ಟ ಚಾಳಿಯೂ ನನಗುಂಟು.

ಹೋಟಲಿಗೆ ನಡೆ ನಡೆದು ಕಾಲ್ಗೆ ವ್ಯಾಯಾಮ
ಸಿಗರೇಟ ಹೊರೆ ಹೊತ್ತು ಕೈಗೆ ವ್ಯಾಯಾಮ
ಕಾಫಿ ಕುಡಿದೀ ಜಠರ ಪಟುವಾಯ್ತು ಗೆಳೆಯ
ದೋಸೆ ಜಗಿದೀ ಹಲ್ಲು ಬಲವಾಯ್ತು ಹಳೆಯ
ಪೇಳಲೇಂ ಸಿನಿಮ ನಟಿಯರ ನೋಡಿ ಕಣ್ಣು
ಬಲವಾಯ್ತು ಇನ್ನೆಂಥ ವ್ಯಾಯಾಮ ಮಣ್ಣು.

ಇಷ್ಟೇ ಅಲ್ಲ ನಮ್ಮ ವಠಾರದ ನಲ್ಲಿಯ ಜಗಳ, ಸ್ವಪ್ನಸುಂದರೀ ಸರ್ಕಲಿನ ಬಿನ್ನಾಣಗಳ ಬೆದರಿಕೆ, ಬಾಕಿ ಅಂಗಡಿಯ ಅಗಸ, ದುಡ್ಡು ಕೊಡಬೇಕಾಗಿರುವ ಡಾಕ್ಟರ್ ಷಾಪ್, ಉದ್ರಿ ಉಳಿದಿರುವ ಫ್ಯೂಯಲ್ ಡಿಪೋ, ಇಷ್ಟರ ಮೇಲೆ ಡೀಸೆಲ್ ಲಾರಿಗಳ ಹಿಂಬಾಲನೆ ಇವೆಲ್ಲ ನನ್ನ ಈ ಅದ್ಭುತ ವೇಗಕ್ಕೆ ಸಹಕಾರಿಗಳಾಗಿವೆ. ಇನ್ನು ಮೇಲೆ ಹಾಕಿಯಲ್ಲಿ ಬೀರೆಯವರು ನಮಗೆ ನಾವು ಹಾಕಿದರೆ? ಎಂಬ ಭಯವಿದ್ದರೂ, ಮಿಲ್ಖಾ, ಜೋರಾ, ಗುಲ್ಜಾರಾ ಸಿಂಗರು ಏನು ಮಾಡುವರೋ, ಅವರ ಕೈಲಾದೀತೋ ಇಲ್ಲವೋ ಎಂಬ ಅನುಮಾನವಿದ್ದರೂ, ದೇಶದಾದ್ಯಂತ ಹಾವಳಿ ಮಾಡುವ ಆಯ್ಕೆಗಾರರಿಗೆ ಒಳ್ಳೆಯ ಹೆಸರು ಬರುವುದನ್ನು ತಪ್ಪಿಸುವುದಕ್ಕಾದರೂ ರೋಂ ಒಲಿಂಪಿಕ್ಸ್‌ಗೆ ಹೋಗಬಾರದೆಂದು ನಿರ್ಧರಿಸಿದ್ದೇನೆ. ಇಷ್ಟರ ಮೇಲೆ ಬಲವತ್ತರವಾದ ಪ್ರಾರ್ಥನೆ ಬಂದರೆ, ದೇಶ ಸೇವೆಗೆ ನಾನು ಸರ್ವದಾ ಸಿದ್ಧ. ಎಂದು ನಮ್ರತೆಯಿಂದ ತಿಳಿಸಲಿಚ್ಛಿಸುತ್ತೇನೆ.

ಜೈಹಿಂದ್ !

ಅ. ರಾ. ಸೇ.

ಎಲ್ಲರಿಗೂ 'ಇದೇ' ಉತ್ತರ

ಸುಮಾರು ಜನ ಯುವಕರು, ಯುವತಿಯರು ನಮ್ಮ ಕಚೇರಿಗೆ ಮನವಿಪತ್ರಗಳನ್ನು ಬರೆಯುತ್ತಿದ್ದಾರೆ. ಎಲ್ಲರದೂ ಒಂದೇ ಶೋಭಾನೆ! "ನಾವು ಇಷ್ಟು-ಇಷ್ಟು ಇಂತಿಂತ ಪರೀಕ್ಷೆ ಪ್ಯಾಸು ಮಾಡಿದ್ದೇವೆ. ಇಷ್ಟಿಷ್ಟು ಲೇಖನಗಳನ್ನು ಕಾಲೇಜ್ ಪತ್ರಿಕೆಯಲ್ಲಿ ಪ್ರಕಟಿಸಿದ್ದೇವೆ. ನಿಮ್ಮ ಪತ್ರಿಕಾ ಕಚೇರಿಯಲ್ಲಿ ಕೆಲಸಮಾಡಲು ಆಶೆಪಡುತ್ತೇವೆ. ಬೇಕಾದರೆ ಫೋಟೋ ಕಳಿಸುತ್ತೇವೆ. ಅವಕಾಶ ಕೊಟ್ಟರೆ ಖುದ್ದು ಬಂದು ಭೇಟಿಯಾಗುತ್ತೇವೆ. ಹಿರಿಯ ಸಾಹಿತಿಗಳ, ರಾಜಕೀಯ ಮುಂದಾಳುಗಳ, ಮೆಚ್ಚಿನೋಲೆಗಳನ್ನು ಕಳಿಸುತ್ತೇವೆ. ಏನು ಸಂಬಳ ಕೊಟ್ಟರೂ ಪರವಾಗಿಲ್ಲ. ಮುಂದೆ ಕೆಲಸ ನೋಡಿ ಪಗಾರ ನಿರ್ಧರಿಸಬಹುದು" ಇದೇ ಪಲ್ಲವಿ.

ಒಬ್ಬೊಬ್ಬರಿಗೂ ಜವಾಬು ಕೊಡುವುದು ಅಸಾಧ್ಯ. ಆದುದರಿಂದ ಈತನಕ ಬರೆದವರಿಗೆ, ಮುಂದೆ ಬರೆಯುವವರಿಗೆಲ್ಲಾ ಈಗಲೇ ಉತ್ತರವನ್ನು ಬಹಿರಂಗವಾಗಿ ಪ್ರಕಟಿಸುತ್ತಿದ್ದೇವೆ. ನಮ್ಮ ಉತ್ತರ ಇಷ್ಟೇ!

"ನಮ್ಮ ಪತ್ರಿಕಾ ಕಚೇರಿಯಲ್ಲಿ ಎಲ್ಲ ಉತ್ಸಾಹಿಗಳೂ ಅವಕಾಶವಿದೆ. ಆದರೆ ಎಲ್ಲರೂ ನಮ್ಮಂತೆ ಅತಿ ತಳಗಿನ ದರ್ಜೆಯ ಕೆಲಸದಿಂದ ಆರಂಭಿಸಬೇಕು. ನಮ್ಮ ಕಾರ್ಯಾಲಯದಲ್ಲಿ ಅತಿ ಕೆಳಗಿನ ಕೆಲಸ ಅಂದರೆ ಸಂಪಾದಕರದು. ಯಾರು ಬೇಕಾದರೂ ಸಂಪಾದಕರ ಭಾಗಿಗಳಾಗಿ ಬಂದು ಸೇರಿಕೊಂಡು ಆಗುವ ನಷ್ಟ ಹಂಚಿಕೊಳ್ಳಬಹುದು. ಹಣವಂತ ಉತ್ಸಾಹಿಗಳಿಗೆ ಸದಾ ಸ್ವಾಗತ".

ಒಲುವಿನ ಮದುವೆಯು ತಪ್ಪಿರಬಹುದು!
ಚೆಲುವನ ಮದುವೆಯು ತಪ್ಪೇ ಆಹುದು!!

* * *

ಜನ್ಮಭೂಮಿ

ಇದೇ—

ಇದೆ ಸ್ವಾಮಿ! ನನ್ನ ಹುಟ್ಟೂರು
ಜಗದ್ವಿಖ್ಯಾತ ನನ್ನ ಜನ್ಮ ಭೂಮಿ
ಊರ ನೆನೆದರೆ ಆನಂದ—ತರಂಗ ಮಾಲೆಮಾಲೆ
ಇದೋ ಇಲ್ಲಿ ನೋಡಿ,—ಈ ಡೊಂಕು ಹಳ್ಳದ ರಸ್ತೆ
ಊರನಿಬ್ಭಾಗಿಸಿದು ಈ ಬೈತಲೆಯ ಹಾದಿ
ನಮ್ಮಜ್ಜ ಮುತ್ತಜ್ಜರ ಕಾಲದಲ್ಲೂ ಇತ್ತಂತೆ.
ಅವರಿಗಿಂತಲೂ ಮುದಿಯಂತೆ ಈ ನಮ್ಮ ಬೀದಿ.

ಆಚೆ ಬದಿ ಈಚೆ ಬದಿ
ಎರಡು ಕಣ್ಣಿಂದ್ದಂಗೆ ಎರಡು ಪಾಠಶಾಲೆ.
ನೂರಾರು ಹುಡುಗರು ಕಲಿಯುವುದು ನಿಜವಂತೆ
ಮುಂದಿನೋದಿಗೆ ಹೋದವರ ನಾನಂತು ಕಾಣೆ
ಏನಿದ್ದರೂ ಅವರ ವಿದ್ವತ್ತೆಲ್ಲ ನಮ್ಮೂರಿನಲ್ಲೇ!
ಎಡಪಕ್ಕ - ಬಲಪಕ್ಕ ಇಹವು ಎರಡು ಕೆರೆ.
(ನಿತ್ಯ ನಿರಂತರ - ಬರಿಗೆರೆ)
ಗಳಿಸಿಯೂ ಇಹರು ಕೆರೆ ಹಿಂದೆ ನೂರಾರು ಎಕರೆ ಭೂಮಿ.

ಆದರೂ ನಮ್ಮೂರಿನಲ್ಲಿ ಹೊಟ್ಟೆಗಿಲ್ಲದೆ
ಸಾಯುವರೆ ಬಲುಮಂದಿ – ಸ್ವಾಮಿ.
ಅಲ್ಲೊಂದು ಇಲ್ಲೊಂದು – ಮನೆ ಮುಂದೆ ಗೊಬ್ಬರದ ಗುಂಡಿ
ಸಂಗ್ರಹಿಸುವರು ವರ್ಷಕ್ಕೆ ನೂರಾರು ಬಂಡಿ
ಇದೆ ಸ್ವಾಮಿ ನಮ್ಮ ವಿಶಿಷ್ಟ ಆಸ್ತಿ–ಪಾಸ್ತಿ
(ಇದರ ಸಂಪರ್ಕದಿಂದ ಖಾಯಿಲೆಯೂ ಜಾಸ್ತಿ)

*　*　*　*

ದ್ವೇಷ–ವೈಷಮ್ಯ ಪಾರ್ಟಿ ಜಗಳ
ನಮ್ಮೂರಿನಲ್ಲಿ ನಡೆಯುವುದು ಜಿದ್ದಾ ಜಿದ್ದಿ
ಸುತ್ತ ಹತ್ತೆಂಟು ಹಳ್ಳಿಗಳಿಗೆಲ್ಲ
ತರಲೆಗೆ ನಮ್ಮೂರ ಹೆಸರೇ ಸುಪ್ರಸಿದ್ಧಿ

* * * *

ಇದೆ ಸ್ವಾಮಿ ನನ್ನ ಹುಟ್ಟೂರು
ಜಗದ್ವಿಖ್ಯಾತ ನನ್ನ ಜನ್ಮಭೂಮಿ
ನನಗಂತು ಅತಿ ಮಮತೆ ನನ್ನೂರ ಮೇಲೆ
ಊರ ನೆನೆದರೆ ಆನಂದ–ತರಂಗ ಮೂಲೆ ಮೂಲೆ
ಯಾವ ನಗರಕ್ಕೆ ನಮ್ಮೂರೇನು ಕಮ್ಮಿ?
ಏನು ಬೇಕಾದರೂ ನಮ್ಮೂರಿಗೇ ಬನ್ನಿ
ಅಂಗಡಿ ಹೋಟೆಲು ಕ್ಲಬ್ಬು ಸಹ ಇಹವು
ಸಿಕ್ಕುವುದು ಎಲ್ಲವೂ–ಬೇಕಾದ್ದೊಂದನುಳಿದು
ಏನು ಸ್ವಾಮಿ ಏನಾದರೂ ಬೇಕೆ?
ಬೇಕಾದರೆ ಒಮ್ಮೆ ನಮ್ಮೂರಿಗೇ ಬನ್ನಿ.

ಯಚ್ಚೆಂಪಿ

ಪ್ರಾಪರ್ಟಿ ಆಸೆಯಿರೆ ಬೇಗ ಪಾರ್ಟಿಗೆ ಸೇರು।
ಚಾರಿಟಿಯ ನೆಪದಿಂ ಚಿರೋಟಿ
ಅದುವೇ ನೈಜ ಮೆಚೂರಿಟಿ ಎಂದ ನಾ ಸ್ವಲ್ಪಜ್ಞ॥

—ಕೆ. ಅ. ನಾ.

* * * *

ಅರ್ಜಿಯನು ಹಾಕಿರಲು ಮರ್ಜಿಯನು ಅನುಸರಿಸು।
ಭರ್ಜರಿಯಾ ಮನದ ರಾಯನೊಳು ಘರ್ಜಿಸೆ
ಕಜ್ಜಿಯನು ಕೆರೆದಂತೆ ಸ್ವಲ್ಪಜ್ಞ॥

—ಕೆ. ಅ. ನಾ.

* * * *

ಕಾಮಣ್ಣ - ಕಟ್ಟೆಗೆ -

ಕಾಮನ ಹಬ್ಬಕ್ಕೆ ಮುಂಚೆಯೇ ಅರ್ಥ ಸಚಿವರು ಬಡ್ಜೆಟ್ಟ್‌ನ್ನು ಮಂಡಿಸಿ ಸರ್ಕಾರಿ ನೌಕರರಿಗೆಲ್ಲಾ ಐದು ರೂಪಾಯ್ ಹೆಚ್ಚು ಭತ್ಯದ ಆಶೆ ತೋರಿದ್ದಾರಾದ್ದರಿಂದ ಕಾಮನ ಹಬ್ಬವು ಪ್ರತಿ ವರ್ಷದಂತೆ ಈ ವರ್ಷ ವಿಜೃಂಭಣೆಯಿಂದ ನಡೆಯಲಾರದೆಂಬ ಅನುಮಾನದಿಂದ ನಾನು ಶೋಕಿಸುತ್ತಿದ್ದೆ. ಯಥಾಪ್ರಕಾರ ನನ್ನನ್ನು ನೋಡಿ ಆಕೆಯೂ ಸಮವಾಗಿ ಅರ್ಧದಷ್ಟು ಅದನ್ನೇ ಹಂಚಿಕೊಂಡಳು. ನಮ್ಮನ್ನು ನೋಡಿ ಕಣ್ಣೀರಿಡುತ್ತಾ ಮಕ್ಕಳೂ ಜೋಲು ಮುಖ ಹಾಕಿದವು. ಆಗ ನೋಡಿ ನಮ್ಮನೆ ಹಾಲಿನವಳು ಕೇಳೋಕ್ಕೆ ಬರುತ್ತಿದ್ದದರಿಂದಲೋ ಏನೋ ಬಿದೀಲಿ ಬಿಕು ಗಾಳಿ ಎದ್ದು ಗೋಡೆ ಮೇಲೆ ನೇತಾಡುತ್ತಿದ್ದ ಕ್ಯಾಲೆಂಡರು ಕೆಳಕ್ಕೆ ಬಿತ್ತು. ಅದನ್ನು ತೊಗೊಂಡು ನೋಡುತ್ತಾ ರುದ್ರರಮಣೀಯವಾಗಿ ನಗುತ್ತಾ, ಇನ್ನೂ ಚಿಕ್ಕ ವಯಸ್ಸಿನ ಮನೆಯಾಕೆ ಹೇಳಿದಳು—" ತಿಂಗಳ ಕೊನೆಯಲ್ಲೇ ಯುಗಾದಿ ಹಬ್ಬ ಬರುತ್ತಲ್ರೀ, ಆಗ ನಾನು ಹಬ್ಬದ ಸಾಮಾನುಗಳ ಪಟ್ಟಿಯನ್ನು ನಿಮ್ಮ ಕೈಗೆ ಕೊಟ್ಟು, ' ರೀ–ಬೆಲ್ಲದಚ್ಚು ' ಎಂದು ನಾನು ಲೊಚಗುಟ್ಟುವಾಗ, ಬೇವಿನಂಥ ಬೆಲೆಯು ನಿಮ್ಮ ನಾಲಿಗೇನ ಇರಿಯೊಲ್ಲವೇನ್ರಿ–ಕಾಮನ ಹಬ್ಬದ ವಾದ್ಯ ಸಂಗೀತವೇ ನಿಮ್ಮ ಕಿವಿಗಳಲ್ಲಿ ಭೋರ್ಗರಿಯುವುದಿಲ್ಲವೆ, ಅಂದ ಮೇಲೆ ಕಾಮನ ಹಬ್ಬದ ವೈಭವಕ್ಕೆ ಕುಂದೆ. ಅದಕ್ಕೇತಕ್ಕೆ ದುಃಖಪಡುತ್ತೀರಿ " ಎಂದು ಹೌದಲ್ಲಾ ಎಂದುಕೊಂಡು ಸುತ್ತಲೂ ಕೂತಿದ್ದ ಮಕ್ಕಳಿಗೆಲ್ಲಾ ಸಮಾಧಾನ ಹೇಳಿದೆ. " ಓಹೋ, ಹಾಗೆಯೇ " ಎಂದು ಅವರೆಲ್ಲಾ ಖುಷಿಯಿಂದ ಎದ್ದು ಹೋದರು !

ಮಾರನೆ ದಿನವೇ ಕಾಮನ ಹುಣ್ಣಿಮೆ. ಮಕ್ಕಳಿಗೆ ತಲಾ ಒಂದೊಂದು ಸೀಸೆ ರಂಗು, ಮೂರು ಮೂರು ಬೆರಣಿ, ಒಂದೊಂದು ಸೌದೆ, ಕಡಲೇಪುರೀಗೆ ಒಂದಿಷ್ಟು ಚಿಲ್ಲರೆ ಹಂಚಿ ಸಾಯಂಕಾಲದ ಹಬ್ಬಕ್ಕೆ ಮನೇಲಿ ವ್ಯವಸ್ಥೆ ಮಾಡಿ ನಾನು ಹಬ್ಬವನ್ನಾಚರಿಸಲು ಸುಖವಿಲಾಸ ಹೋಟಲಿಗೆ ಹೋದೆ !—ಯಾರಾದರೂ ಪರಿಚಯಸ್ಥರು ಸಿಕ್ಕರೆ ದೇಶದ ಬಡ್ಜೆಟ್ಟ್‌ನ್ನೂ ಚರ್ಚಿಸಬಹುದೆಂದು. ಅಷ್ಟು ಹೊತ್ತಿಗಾಗಲೇ ಮಾಣಿಗಳೆಲ್ಲಾ ಸಾಮೂಹಿಕವಾಗಿ ಮಾಲೀಕನಿಗೆ ಹಬ್ಬ ಮಾಡಿ ವಿಶೇಷ ಭತ್ಯ ಪಡೆದು, ಬೀಡ ಹಾಕಿಕೊಳ್ಳುತ್ತಿದ್ದರು ! ಬಲು ಮೋಜು ಮಾಡಿದ್ದರು ಮಾಣಿಗಳು—

ತುಟಿಗೆಲ್ಲಾ ರಂಗು, ತಲೆಗೆಲ್ಲಾ ಟೋಪಿ, ಹಾಕಿ ಕೋಲಿನಂಥ ತಿಲಕ, ರುಬ್ಬು ಗುಂಡಂಥ ಮೈಯಿ, ಬಾಯಿಮೇಲೇ ಕೈಯಿ—ಬಲು ಸರಸಿಗಳು ಮಾಣಿಗಳು. ಆದರೆ ನೋಡಿ, ಬಾಕಿ ಸಿಬ್ಬಂದಿಯೆಲ್ಲಾ ಇಷ್ಟೊಂದು ಖುಷಿಯಾಗಿ ಹಬ್ಬಕ್ಕೆ ಅಣಿ ಮಾಡಿಕೊಳ್ಳುತ್ತಿದ್ದರೆ, ಅಡಿಗೇ ಮನೇಲಿ ತಿಂಡಿ ಮಾಡುತ್ತಿದ್ದ ವ ಒಲೆ ಮುಂದೇನೇ ಅಲುಗಾಡದೆ ಹಗಲುಗನಸು ಕಾಣುತ್ತಾ ಕೂತಿದ್ದ. ಮಾಣಿಗಳು ಅವನನ್ನು ಹಬ್ಬಕ್ಕೆ ಬಾ ಅಂತ ಈಚೆಗೆ ಎಳೆಯುತ್ತಿದ್ದರು. ಅವ ಬರೊಲ್ಲ ಎಂದು ಹಠ ಹಿಡಿದು ಕೂತು ಕೊಂಡಿದ್ದನು. ಆಗ ನಾನು ಒಬ್ಬ ಮಾಣಿಯನ್ನು ಕರೆದು " ಅವನನ್ನೇಕಯ್ಯ ಹಾಗೆ ಪೀಡಿಸುತ್ತೀರ. ರಾಮಕೃಷ್ಣ ಅಂತ ಅವನ ಪಾಡಿಗೆ ಅವನು ಒಲೆಮುಂದೆ ಕೂತಿ ದಾನೆ. ಪೇಟೇಲಿ ಜನಗಳ ಮಧ್ಯೆ ಹಗಲ್ಹೊತ್ತಿನಲ್ಲಿ ಸುಳಿದಾಡೋಕೆ ಆತ ಹೆದರೋದು ಸಹಜ! ಎಂಥವರಿಗೂ ಪ್ರಾಣದ ಮೇಲೆ ಆಸೆ ಇರೊಲ್ವೆ" ಎಂದು ಬುದ್ಧಿವಾದ ಹೇಳಿದೆ. ಇದನ್ನು ಕೇಳಿದ ಮಾಣಿ ಮಿರು ಮಿರುಗುವ ನಾಲಿಗೆಯಿಂದ " ಇವತ್ತಿನ ಸ್ಪೆಷಲ್ ಶಂಖಪೂರಿ ಕೊಡಲಿ ಸಾರ್" ಎಂದ. ತಿಲ್ಲಾಣದಂತಿದ್ದ ಅವನ ಸ್ವರ ಸಂಪತ್ತನ್ನನುಭವಿಸುತ್ತಾ ಅಲ್ಲಾಡದೆ ಕೂತೆ, ಮಲ್ಲಾಡದ ಗಿಣಿಯಂತೆ ಆ ಮಾಯಾ ಜೀವಿ ಮಿಸಿಲಿಯಂತೆ ಅಂತರ್ಧಾನವಾಗಿ ಮರುಕ್ಷಣದಲ್ಲಿಯೇ ಧೂಮಕೇತುವಿನಂತೆ ಗೋಚರಿಸಿ, ಶಂಖಪೂರಿ ಸಮೇತ! ಬಲು ಶಹಣೆ ಅವ—ಶಂಖಪೂರೀನ ಮೇಜಿನ ಮೇಲಿಟ್ಟು ವಿನಿಯವಾಗಿ, " ನೀವು ಹೇಳಿದ್ದು ಸ್ವಾರಸ್ಯವಾಗಿತ್ತು ಸಾರ್. ಅದನ್ನು ನಾನು ವಿವರವಾಗಿ ಕೇಳಬಹುದೆ ಸಾರ್" ಎಂದ. ಕಾಮನ ಹಬ್ಬದ ಪ್ರಯುಕ್ತ ನಾನು ಮಾಣೀಗೆ ಧರ್ಮರಾಯನ ಜಾತ್ರೇಲಿ ನಡೆದ ಕಥೆಯನ್ನು ಹೇಳಿದೆ.

ಕೆಲವು ದಿವಸಗಳ ಹಿಂದೆ ಧರ್ಮರಾಯನ ಜಾತ್ರೇಲಿ ಹೊಗೆ ಬಣ್ಣದ ಕಮಟು ವಾಸನೆಯ ಪಂಚೆಯನ್ನುಟ್ಟುಕೊಂಡು, ಎಲೆಯಡಿಕೆಯನ್ನೂ ಹೊಗೆ ಸೊಪ್ಪನ್ನೂ ಸದಾ ಅಗಿಯುತ್ತಿದ್ದ ಒಬ್ಬ ಮನುಷ್ಯನು ದೇವರಿಗೆ ಅಡ್ಡಬಿದ್ದನು. ಪೂಜಾರಿಯ ಮೂಗಿಗೆ ಪಂಚೆಯ ಕಮಟು ವಾಸನೆಯು ಬಡಿದು ಅದು ಭ್ರಂಹ್ಮರಂಧ್ರಕ್ಕೇ ಏರಿ ಬುದ್ಧಿ ಭ್ರಮಣೆಯನ್ನುಂಟುಮಾಡಿರಬೇಕು! ಅವನಿಗೆ ಹಿಂದಿನ ಪಾಪ ಕರ್ಮಗಳೆಲ್ಲಾ ಜ್ಞಾಪಕಕ್ಕೆ ಬಂದಿರಬೇಕು. ಬ್ರಹ್ಮೇಂದ್ರಭವನದ ತಿಂಡಿ ಪದಾರ್ಥಗಳ ವಾಸನೆಯೇ ಅಲ್ಲಿ ಹರಡಿರಬೇಕು! ಪೂಜಾರಿ ಮುಗಮ್ಮಾಗಿ ಅತನನ್ನು " ಬ್ರಹ್ಮೇಂದ್ರಭವನದಲ್ಲೇ ಇನ್ನೂ ಇದ್ದೀರ ಎಂದು ಕೇಳಿದನು. ಭಗವಂತನ ಅಡಿದಾವರೆಯಲ್ಲಿ ಬಿದ್ದಿದ್ದ ಆ ಶಾಪಗ್ರಸ್ಥನು ' ಹೂ ' ಎಂದನು. ವರ ಕೇಳಿಕೊಂಡು ಅವನು ಎದ್ದಿದ್ದೇ ತಡ ಪಕ್ಕದಲ್ಲೇ ಇದ್ದ ಜನ ಅವನನ್ನು ಮುತ್ತಿಕೊಂಡು ಗುದ್ದಿ ಕೆಡವಿದರು! ಅವ ಅಯ್ಯೋ ದೇವರೆ ಅಂತ ಕೂಗಿಕೊಂಡು ಪಂಚೆ ಸಮೇತ ಬ್ರಂಹ್ಮೇಂದ್ರಭವನದ ಕಡೆ ಓಡಿ ಹೋದ. ಇದೆಲ್ಲಾ ಆಗುತ್ತಿದ್ದಾಗ ನಾನೂ ದೇವರಿಗೆ ಹರಕೆ ಸಲ್ಲುಸುತ್ತಿದ್ದೆ. ಅದೇನು ಲೀಲೆಯೋ ನೋಡಿ—ಹುಚ್ಚರಂತೆ ಆ ಅಡಿಗೆಯವನ ಮೇಲೆ ಬಿದ್ದು ಕಾದಾಡಿದ

ಜನರು ಅವ ಓಡಿ ಹೋಗುತ್ತಲು ಬಹಳ ಸಭ್ಯರಂತೆ ದೇವರ ನಾಮ ಹಾಡುತ್ತಾ ಏನೂ ಗೊತ್ತಿಲ್ಲದವರಂತೆ ಸೌಮ್ಯವದನರಾಗಿ ನಿಂತುಕೊಳ್ಳೋದೆ! ಒಬ್ಬರಿಗಾದರೂ ತಾವು ಇಷ್ಟು ಹೊತ್ತೂ ಏನು ಮಾಡಿದೆವೆಂಬುದು ಅರಿವಿದ್ದಂತೆಯೇ ಕಾಣಿಸಲಿಲ್ಲ. ಪೂಜಾರಿಯೂ ಅಷ್ಟೆ! ಒಮ್ಮೆಯೇ ತನ್ನ ಹಳೆಯ ನೆನಪುಗಳನ್ನೆಲ್ಲಾ ಮರೆತು ಭಕ್ತಾದಿಗಳಿಗೆ ವಿಭೂತಿಯನ್ನು ಹಂಚುತ್ತಾ ದಕ್ಷಿಣೆ ವಸೂಲಿ ಕೆಲಸದಲ್ಲಿ ನಿರುತ ನಾದನು. ಆಗಲೇ ನೋಡಿ, ಹೋಟಲು ಅಡಿಗೆಯವನ ಪಂಚೆಯು ಎಷ್ಟು ಪ್ರಭಾವ ಶಾಲಿಯಾದುದು, ಎಷ್ಟುಗ್ರವಾದುದು, ಅದರ ವಾಸನೆಯು ತಾಕಿದರೆ ಜನಗಳು ಹುಚ್ಚುನಾಯಿ ಕಡಿದವರಂತೆ ಹೇಗೆ ಕಿರಿಚಿಕೊಳ್ಳುತ್ತಾರೆ, ರೋಷಾವೇಷದಿಂದ ಹೇಗೆ ಕಾದಾಡುತ್ತಾರೆ—ಎಂಬ ವಿಚಾರಗಳೆಲ್ಲಾ ನನ್ನ ಅನುಭವಕ್ಕೆ ಬಂದಿದ್ದು!

ನಾನು ಈ ಕಥೇನ ಮಾಣೀಗೆ ಹೇಳುತ್ತಿದ್ದಾಗಲೇ ರಮಾರಮಿ ಬ್ಯಾಂಡಿನಿಂದ ಕೂಡಿದ, ಬಿರಣಿ ಸೌದೆ ತುಂಡುಗಳಿಂದ ಸುಸಜ್ಜಿತವಾದ ಊರಿನ ಥಾಂಡಿಗರ ಮೆರವಣಿಗೆ ಬರುತ್ತಿತ್ತು. ಹುಲಿ ವೇಷದ ಮನೋರಂಜನೆಯೂ ಇತ್ತು. ಚೀನಾ ದೇಶಕ್ಕೆ ಸೇರಿದವನೆಂದು ಹೇಳಲಾದ ಪಾಳೇಗಾರನು ಗುಜ್ಜು ಹೆಜ್ಜೆ ಹಾಕಿಕೊಂಡು ಕನ್ನಡೀಲಿ ಮುಖಾನ ನೋಡಿಕೊಳ್ಳುತ್ತಾ ನಿಂಬೆ ಹಣ್ಣುಗಳನ್ನು ಮೀಸೆ ಮೇಲೆ ಕುಣಿಸುತ್ತಿದ್ದನು. ಮೀಸೇನ ಹಾಗೇನೇ ಚಾಚುತ್ತಿದ್ದನು! ಗಂಡುಹುಲಿಯೊಂದು ಹೆಣ್ಣು ಹುಲೀಗೆ ಅಲಂಕಾರ ಮಾಡಿ ಕುಣಿಸುತ್ತಿತ್ತು. ಖರ್ಚಿಗೆ ಕಾಸುಬೇಕೆಂದು ಅಂಗಲಾಚುತ್ತಿತ್ತು. ಹೆಂಗಸಿನ ವೇಷಧಾರಿಯಾದ ಕಾಮಣ್ಣನ ಮುಖದಲ್ಲಿ ಅದೆಂಥ ಕಳೆ ಅನ್ನುತ್ತೀರ—ಅವನನ್ನು ಆ ಸಾಯಂಕಾಲ ನೋಡಿದಾಗಲೆಲ್ಲಾ ಸಂತೇಲಿ ತೊಟ್ಟಿಲನ್ನ ವ್ಯಾಪಾರ ಮಾಡೋಣವೇ ಅಂತ ಅನ್ನಿಸುತ್ತಿತ್ತು—ಅಷ್ಟು ಚೆನ್ನಾಗಿ ಅಲಂಕಾರ ಮಾಡಿಕೊಂಡು ಸೆರಗು ಹಾರಿಸುತ್ತಿದ್ದನು! ಆದರೆ ನಮಗೆ ಬಲು ಮೆಚ್ಚಿಕೆ ಯಾದದ್ದು ರಂಗಣ್ಣನ ಪೋಲೀಸ್ ಕಾನ್‌ಸ್ಟೇಬಲ್ ವೇಷ! ಪೇರ್ಷ ಆದ ಮೇಲೆ ರಂಗಣ್ಣನು ಈ ವರ್ಷ ಕಾಮನ ಹಬ್ಬದಲ್ಲಿ ಪೋಲೀಸ್ ವೇಷವನ್ನೇ ಹಾಕಿಕೊಂಡು ಬಂದಿದ್ದನು. ಅವನು ತನ್ನ ಹಳೆಯ ಯೂನಿಫಾರಂನ್ನೇ ಹಾಕಿಕೊಂಡು ಬಲಗೈಲಿ ಒಂದು ಸೌಟನ್ನೂ ಎಡಗೈಲಿ ಒಂದು ಈಳಿಗೆ ಮಣೆಯನ್ನೂ ಹಿಡಿದುಕೊಂಡು ನವರಂಗ್ ನಾಟ್ಯವನ್ನಾಡಿ ತೋರಿಸಿದಾಗ ನಾವೆಲ್ಲಾ ಲಬೋಲಬೋ ಮಾಡಿದೆವು! ರಂಗಣ್ಣನು ಮೂರು ನಾಲ್ಕು ಬೆಳ್ಳಿ ಲೋಟಾಗಳನ್ನೂ, ಮೆಡಲುಗಳನ್ನೂ ಯೂನಿ ಫಾರಂಗೆ ಸಿಕ್ಕಿಸಿ ಅಲಂಕಾರ ಮಾಡಿಕೊಂಡಿದ್ದನು. ಕಾಶ್ಮೀರದಲ್ಲೋ, ಕೊರಿಯಾ ದಲ್ಲೋ, ಮ್ಯಾಖ್‌ಮೋಹನ್ ರೇಖೆ ಹತ್ತಿರವೋ ರಂಗಣ್ಣನು ಅಸಾಧಾರಣ ಶಕ್ತಿ ಸಾಮರ್ಥ್ಯಗಳನ್ನು ತೋರ್ಪಡಿಸಿರಬೇಕು, ಸರ್ಕಾರ ಮೆಚ್ಚಿ ಈ ಬಹುಮಾನಗಳನ್ನು ಕೊಟ್ಟಿರಬಹುದೆಂದು ಅರ್ಥ ಮಾಡಿಕೊಂಡಿದ್ದೆವು. ಆದರೆ ಈ ಸೌಟು, ಈಳಿಗೆ ಮಣೆಗಳ ಅರ್ಥ ನಮ್ಮದಂತೆ ಕಾಡುತ್ತಿತ್ತು. ‘ಇದರ ಒಳ ಅರ್ಥವೇನು, ತಿಳಿಸು

ವೆಯಾ ರಂಗಣ್ಣ" ಎಂದು ಕೇಳಿದೆವು. ರಂಗಣ್ಣನು ಶಂಖವಾದ್ಯದ ಹಿಮ್ಮೇಳದಲ್ಲೇ ವಿಶ್ರಾಂತಿ ತೆಗೆದುಕೊಳ್ಳುತ್ತಾ, ಅವನು 1929ನೆ ಇಸವಿಯಲ್ಲಿ ಲ್ಯಾಂಡರ್ ಸನ್‌ರವರ ಕಾಲದಲ್ಲಿ ಪೋಲೀಸ್ ಇಲಾಖೆಗೆ 3 ರೂ ಸಂಬಳಕ್ಕೆ ಸೇರಿದಾಗಲಿನಿಂದ ಮೊನ್ನೆ ಮೊನ್ನೆ ರಿಟೈರ್ ಆದ ವರಿಗಿನ ಕಥೆಯನ್ನೆಲ್ಲಾ ಸ್ವಾರಸ್ಯವಾಗಿ ಹೇಳಿದ. ಅವನು ಯಾವ ಪೋಲೀಸ್ ಠಾಣೆಯಲ್ಲೂ ಬಂದೂ ಕವನವನ್ನಾಗಲೀ, ಕಡೆಗೆ ಲಾಟಿಯನ್ನಾಗಲೀ ಹಿಡಿದವನೇ ಅಲ್ಲವಂತೆ! 30 ವರ್ಷಗಳಲ್ಲಿ ಅವನು ವರ್ಗವಾಗಿ ಹೋದ ಊರುಗಳಲ್ಲೆಲ್ಲಾ ಅವನನ್ನು ಇಲಾಖೆ ಮೇಲಧಿಕಾರಿ ಮನೇಲಿ ಅಡಿಗೆ ಕೆಲಸಕ್ಕೇ ಹಾಕಿಕೊಳ್ಳುತ್ತಿದ್ದರಂತೆ! ಖಜಾನೆ ಕಾವಲಿನ ಕೆಲಸಕ್ಕೂ ನೇಮಿಸುತ್ತಿರಲಿಲ್ಲವಂತೆ! ಹೀಗಾಗಿ ದೇಶದಲ್ಲಿ ನಡೆದ ಫೈರಿಂಗ್ ಘಟನೆಗಳ ಸಂದರ್ಭದಲ್ಲೆಲ್ಲಾ ರಂಗಣ್ಣನು ಸೂಪರೆಂಟರ ಮನೆಯಲ್ಲೋ ಇನ್ಸ್ಪೆಕ್ಟರ ಮನೆಯಲ್ಲೋ ಒಗ್ಗರಣೆಯನ್ನು ಹಾಕುತ್ತಿದ್ದನು! ಲಾಟಿಚಾರ್ಜ್ ಆದಾಗೆಲ್ಲಾ ಅಡಿಗೇ ಮನೇಲಿ ಹಪ್ಪಳವನ್ನು ಲಟ್ಟಿಣಿಸುತ್ತಿದ್ದನು! ಗಡಿ ಘಟನೆಗಳಲ್ಲಿ ಅಶ್ರುವಾಯುವು ಪ್ರಯೋಗಿಸಲ್ಪಡುತ್ತಿದ್ದಾಗ ರಂಗಣ್ಣನು ಗೊಜ್ಜಿಗೆ ಈರುಳ್ಳಿಯನ್ನು ಹೆಚ್ಚುತ್ತಿದ್ದನು! ಸುಪ್ರಸಿದ್ಧ ದಫೇದಾರ್ ದೇರಣ್ಣನವರು ಕಳ್ಳ ಭಟ್ಟಿ ತಂಡವನ್ನು ಹಿಡಿಯಲು ಪ್ರಯತ್ನಿಸಿದಾಗ ರಂಗಣ್ಣನು ಪುರಿ ಉಂಡೆ ಕಟ್ಟಲು ಅವಲಕ್ಕಿಯನ್ನು ಹುರಿಯಲು ಕಡಲೆಬಟ್ಟೀಲಿಗೆ ತೆಗೆದುಕೊಂಡು ಹೋಗುತ್ತಿದ್ದನು! ಜೊತೆ ಕಾನ್‌ಸ್ಟೇಬಲ್‌ಗಳೆಲ್ಲಾ ಸಾಯಂಕಾಲವಾಗುತ್ತಲೂ ಚಿಕ್ಕ ರಸ್ತೇಲಿ ನಿಂತು ದೀಪವಿಲ್ಲದ ಬೈಸಕಲ್‌ಗಳನ್ನು ಹಿಡಿದು ಚಿಲ್ಲರೆ ಗಿಟ್ಟಿಸುತ್ತಿದ್ದರೆ ರಂಗಣ್ಣ ಸಂಜೆಯಾಗುತ್ತಲೂ ಸಾಹೇಬರ ಮನೇಲಿ ದೀಪ ಹಚ್ಚಿ ಅಮ್ಮಾವ್ರಗೆ ತಮಿಳು ಭಾಷೆ ಹೇಳಿಕೊಡುತ್ತಿದ್ದನಂತೆ? ಹೀಗೇನೇ ಮೂವತ್ತು ವರ್ಷಗಳು ಕಳೆಯಿತಂತೆ! ಕೆಲವು ದಿವಸಗಳ ಹಿಂದೆ ರಿಟೈರ್ ಆಯಿತಂತೆ! ಹೀಗೆಲ್ಲಾ ರಂಗಣ್ಣ ಹೇಳುತ್ತಾ ತಾನು ಗಿಟ್ಟಿಸಿದ್ದ ಬೆಳ್ಳಿ ಕಪ್ಪುಗಳನ್ನೂ, ಮೆಡಲುಗಳನ್ನೂ ಒಂದೊಂದಾಗಿ ತೋರಿಸುತ್ತಾ ಹೇಳಿದ—"ನೋಡಿ, ಈ ಕಪ್ಪು ಇದೆಯಲ್ಲ—ಚಿಂತಾಮಣೀದು, ಹುಳಿತೊವ್ವೆ, ಮಜ್ಜಿಗೆ ಹುಳಿ ಮಾಡಿ ಅಂಬಡೆ ಕರಿದಿದ್ದೆ! ಸಾಹೇಬ್ರು ಅದನ್ನೆಲ್ಲಾ ಲಕ್ಷಣವಾಗಿ ಉಂಡು ಮೂರು ದಿವಸ ಅರ್ದಂಬರ್ದ ಎಚ್ಚರವಾಗೇ ಮಲಗಿದ್ದರು, ಎಂಥ ಪಾನೀಯವೂ ಇಷ್ಟು ಸಾಧಿಸಲಾರದು ಎಂದು ಸಾಹೇಬರೇ ಹೇಳಿದರು. ಆ ತಿಂಗಳು ಚಿಂತಾಮಣೀಲಿ ಭಾರಿ ಭಾರಿ ಕಳ್ಳತನಗಳು ನಡೆದು ಕಳ್ಳರೆಲ್ಲಾ ತಪ್ಪಿಸಿಕೊಂಡು ಓಡಿ ಹೋದರು! ಸಾಹೇಬರು ಈ ಬೆಳ್ಳಿ ಕಪ್ಪನ್ನು ಬಹುಮಾನವಾಗಿ ಕೊಟ್ಟು ನನ್ನ ವರ್ಗಕ್ಕೆ ಶಿಫಾರಸು ಮಾಡಿದರು!—ಈ ಬೆಳ್ಳಿ ಬಟ್ಟಲು ಹುಲಿದುರ್ಗದ್ದು—ಈ ಮೆಡಲು ದೊಡ್ಡ ಸಾಹೇಬರು ಸರ್ಕೀಟ್ ಬಂದಿದ್ದಾಗ ಟೆಬೀಲಿ ಈರುಳ್ಳಿ ಹುಳಿಯನ್ನವನ್ನು ಹುರುಳಿ ಹಪ್ಪಳದೊಂದಿಗೆ ನಂಜಿಕೊಂಡು ತಿನ್ನುವಾಗ ನನ್ನನ್ನು ಕರೆಸಿ ತಟ್ಟೆ ಮುಂದೇನೇ ಕೊಟ್ಟರು—ಅದಕ್ಕೇ ನೋಡಿ, ನನ್ನ ಯೂನಿಫಾರಂಗೂ, ಈ ಆಯುಧಗಳಿಗೂ ಇಷ್ಟೊಂದು ಸಂಬಂಧ, ಈ ಕಾಮನ ಹಬ್ಬದಲ್ಲಿ

ನಮ್ಮವರಿಗೆ ನಾನು ತೀರಿಸಬೇಕಾಗಿರುವ ಋಣ ಇಷ್ಟೇನೇ ಎಂದು ಹೇಳುತ್ತಾ ಈಳಿಗೆಮಣೇನ ಪಿಟೀಲು ಹಿಡಿದುಕೊಳ್ಳುವಂತೆ ಹಿಡಿದುಕೊಂಡು ಸೌಟನಿಂದ ಅದನ್ನು ಕುಯ್ಯುತ್ತಾ ಸಣ್ಣಾಚಾರಿಯ ನವ್ಯ ಪದ್ಯವೊಂದನ್ನು ಪಲುಕಿದನು! ಇದನ್ನೆಲ್ಲಾ ಕೇಳುತ್ತಿದ್ದ ನಮಗೆ ಈ ವರ್ಷದ ಕಾಮನ ಹಬ್ಬ ಸಾರ್ಥಕವಾಯಿತೆಂದು ಕೊಂಡೆವು, ಹಾಗೂ ಬಾಯಿ ಮೇಲೆ ಕೈ ಆಡಿಸಿದೆವು!

ಅಷ್ಟು ಹೊತ್ತಿಗಾಗಲೇ ಬೀದೀಲಿ ಸೀಸೆ ಗಟ್ಟಲೆ ರಂಗು ಚೆಲ್ಲಲ್ಪಡುತ್ತಾ, ಕೆಲವರು ಹೊಟ್ಟೆಗೆ ತೆಗೆದುಕೊಳ್ಳುವ ರಂಗಿನ ಸೀಸೆಗಳನ್ನು ಸಂದಿಯಲ್ಲೇ ಸಮಾ ರಾಧನೆ ಮಾಡುತ್ತಿದ್ದುದರಿಂದ ಯದ್ವಾ ತದ್ವಾ ಹರ್ಷೋದ್ಗಾರಗಳು ಹೊರಬಿದ್ದವು! ಸೌದೆ, ಬೆರಣಿ, ಬುಟ್ಟಿ, ಪೊರಕೆ, ಮರ ಮುಂತಾದುವುಕ್ಕಿಂತಲೂ ಹೆಚ್ಚಾಗಿ ಹಳೇ ಕಾದಂಬರಿಗಳು, ಕುಟುಂಬ ಯೋಜನೆಯ ಪುಸ್ತಕಗಳು, ಕೋರ್ಟ್ ವ್ಯವಹಾರದ ಕಟ್ಟುಗಳು, ತೆರಿಗೆ ಅಧಿಕಾರಿಗೆ ಕೊಡದೆ ಬಚ್ಚಿಟ್ಟಿದ್ದ ಲೆಕ್ಕದ ಪುಸ್ತಕಗಳು, ಜೋಡಿ ಗ್ರಾಮದ ಲೆಕ್ಕ ಪುಸ್ತಕಗಳು, ಶ್ಯಾನುಭೋಗನ ಮೂಗರ್ಜಿಗಳು, ಕಾಲೇಜು ಹುಡಗರ ಉತ್ತರ ಪತ್ರಿಕೆಗಳು, ಮಾರ್ಕ್ಸ್ ಕಾರ್ಡುಗಳು, ಹೆಣ್ಣು ಹುಡುಗಿಯರ ಮನೆ ಅಡಿಗೆ ಪಾಠಗಳು, ಮುಂತಾದುವೇ ಜಮಾಯಿಸಲ್ಪಟ್ಟಿದ್ದವು. ಇದನ್ನೆಲ್ಲಾ ನೋಡಿದಾಗ ನನಗೆ ಸುಖವಿಲಾಸ ಹೋಟೆಲ್ ಅಡಿಗೆಯವನ ಪಂಚೆಯನ್ನು ಅವನ ಮೈಯಿಂದ ಉಪಾಯವಾಗಿ ಬಿಡಿಸಿ ಈ ಗುಡ್ಡೆಗೆ ಸೇರಿಸಿ ಸ್ವಲ್ಪ ದೇಶಸೇವೆಯನ್ನು ಮಾಡಬೇಕೆನ್ನಿ ಸಿತು. ನಾನು ಈ ಸೂಚನೆಯನ್ನು ರಂಗಣ್ಣನಿಗೆ ತಿಳಿಸಿದ ತಕ್ಷಣ ಹೋಟಲಿನ ಮುಂದೆ ಅಡಿಗೆಯವನ ಪಂಚೆಗೋಸ್ಕರ ಒಂದು ದೊಡ್ಡ ದಂಗೆಯಾಯಿತು. ಅಡಿಗೆ ಯವನಾದರೋ ಪಂಚೆಯನ್ನು ಕೊಡ. ಅದಕ್ಕೂ ಅವನಿಗೂ ಅಷ್ಟು ನಿಕಟ ಸಂಬಂಧ. ತಿರುವೆಂಗಳೂರಿನಲ್ಲಿ ನೇಕಾರ ರಾಮಯ್ಯನು 15 ವರ್ಷಗಳ ಹಿಂದೆ ನೇದಿದ್ದ ಧರ್ಮಪುರಿ ಪಂಚೆ ಅದು. ಅದನ್ನು ಈವರಿಗೂ ನೀರಲ್ಲಿ ಅದ್ದಿದ್ದಿಲ್ಲ! ಭಾಷಾವಾರು ಪ್ರಾಂತ ವಿಭಜನೆಯಾದ ಮೇಲೆ ಅದು ನಮ್ಮ ಪ್ರಾಂತಕ್ಕೆ ಬಂದು ಇಷ್ಟೊಂದು ಗಲಭೆ ಯನ್ನು ಕಾಮನ ಹಬ್ಬದ ದಿವಸ ಎಬ್ಬಿಸಿತು! ಈ ಪ್ರಾಂತ ವಿಭಜನಾ ಗಲಭೆಗಳು ಮುಗಿಯಬೇಕಾದರೆ ಇನ್ನೆಷ್ಟು ದಿವಸಗಳು ಬೇಕೋ ನಾ ಕಾಣೆ! ಬೀದೀಲಿ ಗಲಭೆ ಜೋರಾದ ಮೇಲೆ ಪಂಚೆಯನ್ನು ಕೊಟ್ಟುಬಿಡುವಂತೆ ಮಾಲೀಕರು ಅಡಿಗೆಯವನಿಗೆ ಸೂಕ್ಷ್ಮವಾಗಿ ಸಲಹೆ ಕೊಟ್ಟರು. ಬಂಧು ವಿಯೋಗದಿಂದುಂಟಾಗುವ ದುಃಖವನ್ನು ಅನುಭವಿಸಿ ಅಡಿಗೆಯವನು ತನ್ನ ಕಮಟು ವಾಸನೆಯ ಪಂಚೆಯನ್ನು ಕೊಟ್ಟು ಬಿಟ್ಟನು. ಹೊಸ ಪಂಚೆಯ ಹೆಚ್ಚು ಖರ್ಚು ತಗುಲಿದ ಸಂಕಟ ಮಾಲೀಕನ ಮುಖದ ಮೇಲೆ ಎದ್ದು ಕಾಣುತ್ತಿತ್ತು.

ಆಮೇಲೆ ನಮ್ಮ ಕ್ರಾಂತಿಕಾರರೆಲ್ಲಾ ತಾವು ಜಮಾಯಿಸಿದ್ದ ವಸ್ತುಗಳನ್ನು ಕೈಲಾಸದಂತೆ ಅಲಂಕಾರ ಮಾಡಿ ಹೋಟಲು ಮಾಲೀಕನಿಂದಲೇ ಸೀಮೆ ಎಣ್ಣೆ ಯನ್ನು ಪಡೆದುಕೊಂಡು ಬೆಂಕಿ ಹಚ್ಚಿದರು! ಇಲ್ಲ—ಸೀವು ಊಹಿಸಿದಂತೆ ಆಗಲಿಲ್ಲ,

ಅಡಿಗೆಯವನ ಪಂಚೆಯು ಅಗ್ನಿಯಲ್ಲಿ ಸಂಪೂರ್ಣವಾಗಿ ಉರಿದು ಭಸ್ಮವಾಯಿತು! ಆದರೆ ಹೋಟಲು ಮಾಲೀಕನು ಆ ಬೂದಿಯನ್ನು ಬಿಡಲಿಲ್ಲ. ಓವಲ್‌ಟೈನ್ ಡಬ್ಬಿ ತುಂಬ ಅದನ್ನು ತುಂಬಿಟ್ಟುಕೊಂಡನು. ಮಾರನೆ ದಿನ ಹೋಟಲಿನಲ್ಲಿ ಅದನ್ನು ಬೆರಸಿ ಒಂದು ಹೊಸ ಪಾನೀಯದ ವ್ಯವಸ್ಥೆಯನ್ನು ಮಾಡಿ ಅಡಿಗೆಯವನ ಹೊಸ ಪಂಚೆಯ ಖರ್ಚನ್ನು ಎಬ್ಬಿಸಿದನು. ಅದನ್ನು ಕುಡಿದ ಊರಿನವರಿಗೆಲ್ಲಾ ಫ್ಲ್ಯೂ ರೋಗವು ತಗುಲಿತು. ಅಡಿಗೆಯನು ರಾತ್ರಿ ನಿದ್ದೆ ಹತ್ತದೆ ಒದ್ದಾಡಿದನು. ಬೆಳಗ್ಗೆ ಎದ್ದು ವಾಂತಿ ಮಾಡಿಕೊಂಡು ಜೊತೆ ಅಡಿಗೆಯವನನ್ನು ನೋಡಲು ವೈಕುಂಠ ಭವನಕ್ಕೆ ಓಡಿದನು.

ಹಾ. ರಾ.

ಲಂಚವನು ಸವಿದಿರಲು ಸುಮ್ಮಗಿದ್ದಿರಬೇಕು।
ಲಂಚವನು ತೆತ್ತು ಉಸುರಿದರೆ ಸ್ವಂತ
ಪರ್ಸಿಗೇ ಸಂಚು ಸ್ವಲ್ಪಜ್ಞ॥

* * * *

ಸೀಟನ್ನು ಬಯಸುವೊಡೆ ಸ್ವೀಟು ಹಾಕಲಿಬೇಕು।
ಸ್ವೀಟಿನಿಂ ಓಟು ದೊರಕಲೊಲ್ಲದೆಲೆ
ಬೇರೆ ಹಾದಿಯುಂಟೇ ಸ್ವಲ್ಪಜ್ಞ॥

* * * *

ಕಂಕನಾದರೂ ಮಂತ್ರಿಗೆ ಬಾಜಾ ಬಜಂತ್ರಿ।
ತಂತ್ರಕ್ಕೇ ಕಾಲ, ಯಂತ್ರವೇ ದೈವ
ಕುತಂತ್ರಿಯೇ ಧನಿಕ ಸ್ವಲ್ಪಜ್ಞ॥

* * * *

ಮಾವ ತಾ ಮಂತ್ರಿಯಾಗಿರಲು ಕಾವ ದೈವ ಬೇರೇಕೆ ?
ಭವರೋಗ ವೈದ್ಯ, ಭಕ್ತನಾ ಭವಣೆಗೆ
ಮಾವ ಮಂತ್ರಿಯೆ ಮದ್ದು ಸ್ವಲ್ಪಜ್ಞ॥

* * * * *

ಭಕ್ಷಿ - ಜವಾನ

ಭಕ್ಷಿ ಸಾಹೇಬರು ಕಛೇರಿಗೆ ಬಂದಾಗ ಹುಡುಗಜವಾನ ಕೊಠಡಿಯಲ್ಲಿ ಗಜ್ಜುಗ ಆಡ್ತಾ ಕೂತಿದ್ದುದನ್ನು ಕಂಡು ತುಂಬಾ ರೇಗಿ "ಏನು ಕೆಲಸ ಮಾಡ್ತೀಯೋ ?" ಎಂದು ಕೇಳಿದರು. "ಜವಾನ ಅಂದ ಹುಡುಗ. "ಇದೇನೇನೋ ನೀನು ಮಾಡೋದು, ಕೆಲಸದಿಂದ ವಜಾ ಮಾಡಿದ್ದೇನೆ" ಎಂದು ಹುಕುಂ ಇತ್ತರು. ಖಜಾನೆ ಗುಮಾಸ್ತೆಗೆ ತಕ್ಷಣ ಹೇಳಿ ಕಳಿಸಿದರು. ಒಂದು ವಾರದ ಪಗಾರ ಇವನಿಗೆ ಕೊಟ್ಟು ಕೂಡಲೇ ಕಳಿಸಿಬಿಡಿ ಎಂದರು. ಗುಮಾಸ್ತೆ ಖಜಾನೆಯತ್ತ ಓಡಿ ಯೋಡಿ ಹೋಗುತ್ತಾ ಹುಡುಗ ಜವಾನನ ತಿಂಗಳ ಸಂಬಳ ನಾಲ್ಕು ರೂಪಾಯಿ, ವಾರಕ್ಕೆ ಒಂದು ರೂಪಾಯಿ ಮಾಮೂಲು ಜಾತಾ ಹತ್ತು ಆಣೆ ಕೊಟ್ಟರಾಯಿತು ಎಂದು ಲೆಕ್ಕ ಹಾಕಿ, ಭಕ್ಷಿಯವರ ಹುಕುಂ ಬರೆದು ತಾನೆ ರುಜು ಹಾಕಿ ಖಜಾನೆ ಯಧಿಕಾರಿಯಿಂದ ರೂಪಾಯಿ ಪಡೆದು ಕಿಸೆಗೆ ಸೇರಿಸಿ, ಷರಾಬು ಜೇಬಿನಿಂದ ಹತ್ತಾಣೆ ತೆಗೆದು ಕಾಗದದ ಪೊಟ್ಟಣ ಕಟ್ಟಿ, ಭಕ್ಷಿಯವರ ಕೊಠಡಿಗೆ ಬಂದು, ನಿಂತಿದ್ದ ಹುಡುಗ ಜವಾನನಿಗೆ ಕೊಟ್ಟು, ಅವನ ಎಡಗೈ ಹೆಬ್ಬೆರಳಿನ ಗುರ್ತು ಮಾಡಿಸಿಕೊಂಡು ಭಕ್ಷಿಯವರ ಸಹಿಯನ್ನೂ ಹಾಕಿಸಿಕೊಂಡು, ಹುಡುಗನನ್ನು ದರ ದರ ಎಳೆದು ಕೊಂಡು ಹೊರಕ್ಕೆ ದೂಡಿದ.

ನಿನ್ನ ಮುಖಾನೇ ನೋಡಿಲ್ಲವಲ್ಲೋ ಈ ಕಚೇರಿಯಲ್ಲಿ? ಎಷ್ಟು ದಿವಸದಿಂದ ಜವಾನನ ಕೆಲಸ ಮಾಡ್ತಾ ಇದಿ ಎಂದು ಕೇಳಿದ.

"ಮೂರು ವರ್ಷದಿಂದ ಜವಾನಗಿರಿ ಮಾಡ್ತಾ ಇವ್ನಿ, ನಾರಾಯಣಶೆಟ್ರ ಅಂಗ್ಡೀಲಿ. ಈ ಕಾಗಜ ಭಕ್ಷಿಯೋರಿಗೆ ಝುಟ್ಟಂತ ಕೊಟ್ಟು। ಬಾ ಅಂತ ಕಳಿಸಿದ್ರು ಇಲ್ಲಿ ಬಂದಾಗ ಯಾರೂ ಇರ್‍ಲಿಲ್ಲ ಗಜ್ಜುಗ ಆಡ್ತಾ ಕುಂತೆ. ಭಕ್ಷಿಯವರು ಬಂದ್ರು ರೇಗಿಬಿಡ್ರು ನಂಗೂ ಗಾಬರಿ ಆತು. ಸುಂಕಿದ್ದೆ. ಈ ಕಾಗಜಾನ ಭಕ್ಷಿಯೋರಿಗ ಆಮ್ಯಾಕೆ ಕೊಟ್ಟು ಬಿಡ್ತೀರಾ" ಎಂದು ಹುಡುಗ ಜವಾನ ಹೇಳಿದ.

"ಹಂಗಾ ! ಮಗನೇ ! ನಾ ಕೊಟ್ಟ ಹತ್ತಾಣೇನೂ ಪೀಕು ಇತ್ತ. ಕಾಗದಾನು ಕೊಡು" ಎಂದು ಗುಮಾಸ್ತೆ ಎರಡನ್ನೂ ಇಸುಕೊಂಡು, ಯಾರಿಗೂ ಹೇಳ್ಬೇಡ. ಭಕ್ಷಿಯೋರಿಗೆ ತಿಳಿದರೆ ನಿನ್ನ ತಲೆ ತೆಗೆದುಬಿಡ್ತಾರೆ ಎಂದು ಹುಡುಗನನ್ನು ಹೆದರಿಸಿ ಕಳಿಸಿದನಂತೆ.

—ಪ್ರಕಾಶ್

ಗಾಂಪರ ಗುಂಪು

" ಬೊಂಬಾಯಿ ನಗರದಲ್ಲಿ "

ಸಧ್ಯ ಈ ಪ್ರಾಣಿಗಳನ್ನ ಇಳಿಸಿದರೆ ಸಾಕು ಎಂದೆನಿಸಿತ್ತು ಆ ವಿಮಾನದ ಗಗನಸಖಿಗೆ. ಮರುಳನಂತೂ ಕೇಳಿ ಕೇಳಿ ಚಾಕಲೇಟು ತಿಂದ—ತಿಂದದ್ದೆಲ್ಲಾ ವಾಂತಿಮಾಡಿದ. ಎಲ್ಲರ ಕಿವಿಗೂ ಹತ್ತಿ ತುಂಬಿ ಕಂಭಳಿ ಹೊದಿಸಿದಳು ಆಕೆ. ಮಂಕ ಏನಾದರೂ ನೆಪತೆಗೆದು ಹಗಲೆಲ್ಲಾ ಆ ಏರ್‌ಹೊಸ್ಟೆಸ್‌ಳನ್ನು ಕರೆದು ಹತ್ತಿರದಿಂದ ಅವಳ ಉಬ್ಬು ಎದೆ ನೋಡಿ ಹಲ್ಲು ಕಿಸಿಯುತ್ತಿದ್ದ. ಕಡೆಕಡೆಗೆ ಆಕೆಗೆ ಈತನಿಗೆ ನೀರಿನಲ್ಲಿ ನಿದ್ರೆಗುಳಿಗೆ ಕದಡಿ ಕುಡಿಸಿಬಿಡಲೇ ಎಂದು ಎನಿಸಿತ್ತು. ಅಷ್ಟರಲ್ಲಿ ಬೊಂಬಾಯಿ ಸಮೀಪಿಸುತ್ತಿದೆ ಎಂದು ಎದುರಿಗೆ ಕಂಡ ಟ್ರಾಂಬೆ ಸೀಮೆಎಣ್ಣೆ ಶೋಧನೆಯ ಕಾರ್ಖಾನೆಯ ದೊಡ್ಡ ಕೊಳವಿಗಳೂ ಯಂತ್ರಾಗಾರವೂ ಅವಳ ಬಾಯಿಂದ "fasten your belts" ಎಂಬ ಆಜ್ಞೆ ಹೊರಹೊಮ್ಮಿಸಿತು.

ಗಾಂಪರೊಡೆಯರೂ—ಮಂಕ, ಮಡೆಯ, ಮರುಳ, ಮಡ್ಡಿ, ಮುಠ್ಠಾಳರೂ ಯಾವ ಬೆಲ್ಟು ಎಂಬುದು ಈಗ ಗೊತ್ತು ಎಂಬ ಠೀವಿಯಿಂದ ಬೆಲ್ಟು ಬಿಗಿದುಕೊಂಡರು.

ಸಧ್ಯ ಈ ಹೊಟ್ಟೆ ತೊಳಿಸುವ ಯಂತ್ರದಿಂದ ಇಳಿದು ನೆಲ ಸೇರುವ ಸಮಯ ಬಂದಿತೆಂದು ಗುರು ಗಾಂಪರೂ—ಶಿಷ್ಯರೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಮರುಳ ಎದೆಯ ಬಳಿ ಕೈ ಆಡಿಸಿಕೊಂಡ. ತಣ್ಣಗೆ ಹತ್ತಿತು, ಇದೇನೆಂದು ಗಾಬರಿಯಾಗಿ ನೋಡಿಕೊಂಡ. ಎದೆಯ ಬಳಿ ಕೆಂಪಗೆ ರಕ್ತದಂತೆ ಬಣ್ಣ ಹರಡಿತ್ತು. ಇವನ ಕೈಗೂ ಕೆಂಪು ಅಂಟಿತ್ತು. ಒಂದು ಕ್ಷಣ ಏನೂ ತೋಚದೆ ಮೂರ್ಛೆ ಹೋದಂತೆ ಆಯಿತು. ಹೃದಯ ಬಿರಿದು ರಕ್ತ ಜಿನುಗುತ್ತಿರಬೇಕೆಂದು ತರ್ಕಿಸಿದ.

"ಅಯ್ಯಯ್ಯೋ ಸತ್ತೇ...." ಎಂದು ಒಮ್ಮೆಲೇ ಕಿಟಾರನೆ ಕಿರುಚಿದ ಮರುಳ. ವಿಮಾನ ನೆಲ ಮುಟ್ಟುವ ಮುಹೂರ್ತದಲ್ಲಿ ಈ ಮರುಳನಿಗೇನು ಬಂತು ಎಂದು ಗಾಂಪರ ಗುಂಪೇ ಚಕಿತವಾಯಿತು. ವಾಯುಸಖಿ ವಾಯುವೇಗದಿಂದ ಮರುಳನ ಬಳಿ ಸಾರಿದಳು.

"ಅಮ್ಮಾ ತಾಯಿ—ನಿನ್ನ ಗಗನಯಾತ್ರೆ ಸುಖ ನಮ್ಮ ವೈರಿಗಳಿಗೂ ಬೇಡ—ಇಲ್ಲಿ ನೋಡು ಮಹಾತಾಯಿ. ನನ್ನ ಹೃದಯ ಬಿರಿದು ಎದೆಯಿಂದ ರಕ್ತ ಜಿನು

ಗುತ್ತಾ ಇದೆ—ಅಯ್ಯೋ"—ಎಂದು ರಕ್ತ ಸೀತವಾದ ಕೈಯನ್ನು ತೋರಿಸಿ ಬಾಯಿ ಬಡಿದುಕೊಂಡ. ಪರಮಶಿಷ್ಯ ಸತ್ತನೆಂದೇ ತಿಳಿದು ಗುರುಗಾಂಪರು "ಮರುಳಾ ಮರಣ ಹೊಂದಿದೆಯಾ" ಎಂದು ಅತ್ತರು. "ಅಯ್ಯಯ್ಯೋ" ಎಂದು ಗಾಂಪರ ಗುಂಪೇ ಅಳುವಿಗೆ ಶೃತಿಗೂಡಿಸಿದವು.

"ಎಲ್ಲಿ ಏನಾಗಿದೆ ನೋಡುವ"—ಎಂದು ಆ ವಾಯುಸಖಿ ಮರುಳನ ಎದೆಯ ಬಳಿ ನೋಡಿದಳು. ಒಮ್ಮೆಲೇ ಕಿಲಿಕಿಲಿ ಎಂದು ಮನೋಹರವಾದ ನಗೆಯನ್ನು ಇಡೀ ಹಾರೋಪ್ಲೇನಿಗೇ ತೇಲಿಬಿಟ್ಟಳು. ಇವಳ ಆ ಸುಂದರ ನಗು ಎಲ್ಲರ ಅಳುವನ್ನೂ ಒಮ್ಮೆಲೇ ನಿಲ್ಲಿಸಿಬಿಟ್ಟಿತು. 'ವಾಯುಸಖಿ' ಮರುಳನ ಬಳಜೇಬಿನಿಂದ ಪೆನ್ನೊಂದನ್ನು ಹೊರಕ್ಕೆ ತೆಗೆದಳು. ಅದು ಮರುಳನ ಪೆನ್ನು. ಅದರಲ್ಲಿ ಗುರುಗಳು ಹೇಳುವ ಅಮೃತವಾಣಿಯನ್ನು ಗುರುತು ಮಾಡಿಕೊಳ್ಳಲು ಕೆಂಪು ಮಸಿಯನ್ನು ತುಂಬಿದ್ದ. ವಿಮಾನ ನೆಲದಿಂದ ಮೇಲೆ ಹಾರಿದಾಗ ಮೇಲೆ ಮೇಲೆ ಹೋದಂತೆ ವಾಯುವತ್ತಡ ಕಡಿಮೆಯಾಗುತ್ತದೆ. ಈ ಫೆನ್ನಿನಲ್ಲಿದ್ದ ವತ್ತಡ ಹೆಚ್ಚಿತ್ತು. ಮೇಲೆ ಹೋದಾಗ ಕಡಿಮೆ ವತ್ತಡ ಪ್ರದೇಶಕ್ಕೆ ಹೆಚ್ಚು ವತ್ತಡ ಸೇರಿ ಸಮ ವತ್ತಡ ಪ್ರದೇಶವಾಗಬೇಕಷ್ಟೆ. ಹಾಗೆ ಸಮವಾದಾಗಲೇ ಪೆನ್ನಿನಲ್ಲಿದ್ದ ಮಸಿ ಈಚೆ ಬಂದು ಜೇಬು ಕೆಂಪು ಮಾಡಿದ್ದು.

"ಅಯ್ಯಯ್ಯೋ—ಹ ಹ ಹ ಹ.... ಪೆನ್ನು ಲೀಕಾಗಿ ಚೆಲ್ಲಿದ್ರೆ ರಕ್ತ ಅಂತ ತಿಳಿದೆಲ್ಲೋ ಮರುಳ ನನಮಗನೇ"—ಎಂದು ಮಂಕ ನಗೆಯಾಡಿಬಿಟ್ಟ. ಅಳು ಹೋಗಿ ಏರೋಪ್ಲೇನಿನವರೆಲ್ಲಾ ಬಿದ್ದು ಬಿದ್ದು ನಕ್ಕರು. ಮತ್ತೊಮ್ಮೆ "fasten your belts" ಹೇಳಿದಳು ವಾಯುಸಖಿ.

ಬೊಂಬಾಯಿ ನಗರದ ಆರು-ಏಳು-ಎಂಟು-ಹತ್ತು ಅಂತಸ್ತಿನ ಮನೆಗಳು ಮೇಲಿನಿಂದ, ಒಂದರ ಮೇಲೊಂದಿರಿಸಿದ ಬೆಂಕಿಪೊಟ್ಟಣದ ಊರಿನಂತೆ ಶೋಭಿಸಿತ್ತು "ಗುರುಗಳೇ ಬೊಂಬಾಯಿ ನಗರ ಬೆಂಕಿಪಟ್ಣದಲ್ಲಿ ಮಾಡಿದ್ದೇ"—ಎಂದು ಕೇಳಿದ ಮಂಕ.

"ಇರಬೇಕು. ಇಲ್ಲಿ ಬೀಡಿ-ಸಿಗರೇಟು ಸೇದುವವರು ಬಹಳ ಇರಬೇಕು. ಉಪಯೋಗಿಸಿದ ಬೆಂಕಿಪಟ್ಣ ಬೆಟ್ಟದಂತೆ ರಾಶಿ ಬಿದ್ದಾಗ ಮನೆಕಟ್ಟುವುದು ಶಹಣ್ಯಾರ ಲಕ್ಷಣವಲ್ಲವೆ ?"

—ಎಂದಾಗ ಎದುರಿಗೆ ಕೂತ ಉದ್ದನೆಯ ಮೂಗಿನ ಮಹಿಳೆ ಕಿಸಿಕಿಸಿ ನಕ್ಕಳು. ಮಡೆಯ-ಮಂಕ-ಮರುಳ-ಮುಠ್ಠಾಳರು ಮತ್ತೊಮ್ಮೆ ಏರೋಪ್ಲೇನು ಕಡಿಮೆ ಗಾಳಿಯ (Air pocket) ಪ್ರದೇಶದ ದೆಸೆಯಿಂದ ಒಮ್ಮೆಲೇ ಬಿದ್ದಂತಾಗಲು ಜೋರಾಗಿ ಮೃತ್ಯುಂಜಯ ಮಂತ್ರ ಜಪಿಸತೊಡಗಿದರು.

ಕೆಲವೇ ನಿಮಿಷಗಳಲ್ಲಿ ವಿಮಾನ ನೆಲ ಮುಟ್ಟಿತು. ಗಾಂಪರೊಡೆಯರನ್ನು ಸ್ವಾಗತಿಸುವ ಸಂಭ್ರಮವೋ ಎಂಬಂತೆ ರಣರಣ ಬಿಸಿಲು ಸಂಜೆಯಾಗುತ್ತಿದ್ದರೂ ಕುಕ್ಕುತ್ತಿತ್ತು. ಜೊತೆಗೆ ಧೂಳೂ ಸೇರಿದ ಪ್ರಚಂಡ ಗಾಳಿ ಸುತ್ತಲೂ ಆವರಿಸಿತ್ತು.

" ಶಿಷ್ಯರಿರಾ—ಒಂದು ವಿಚಾರ, ಇಲ್ಲಿಂದಲೇ ನಾವು ವಿಶೇಷ ಎಚ್ಚರಿಕೆಯಿಂದ ಜಾಣತನದಿಂದ ಹುಶಾರಿಯಿಂದ ನಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಬೇಕು"

" ಗುರುಗಳೇ ಜಾಣತನದಿಂದ ಅಂದರೇನು ?" ಎಂದು ವಿಚಾರಿಸಿದ ಮಂಕ.

ಈ ಪ್ರಶ್ನೆಗೆ ಗುರುಗಳು ಮಾತು ಗಕ್ಕನೆ ನಿಲ್ಲಿಸಿದರು. ಏರೋಪ್ಲೇನೂ ಗಕ್ಕನೆ ನಿಂತು ಎಲ್ಲರೂ ಇಳಿಯತೊಡಗಿದರು. ಹಾಳಾದ ಮಂಕ ಏನೋ ಶಹಣೆ ಪ್ರಶ್ನೆ ಯೆಂಬಂತೆ "ಜಾಣತನ ಅಂದರೇನು ?" ಎಂದು ಕೇಳಿ ಇವರ ಇಲ್ಲದ ತಲೆ ಕೆಡಿಸಿದ್ದ.

ಗುರು ಶಿಷ್ಯರು ಒಬ್ಬೊಬ್ಬರಾಗಿ ಡಕೋಟಾದ ಬಾಗಿಲ ಬಳಿ ಬಂದಾಗ ಉಬ್ಬು ಎದೆಯ ಗಗನಸಖಿ ಕೆಂಪು ರಂಗಿನ ತುಟಿಗಳನ್ನು ಕಿವಿಯಿಂದ ಕಿವಿತನಕ ಹಿಗ್ಗಿಸಿ ಮತ್ತೊಮ್ಮೆ ನಮ್ಮ ವಿಮಾನದಲ್ಲೇ ಹಾರಿ" ಎಂದು ಸುಖವಾಗಿ ನೆಲ ಮುಟ್ಟಿದ್ದಕ್ಕೆ ನಮಸ್ತೆ ಹೇಳಿ ಬೀಳ್ಕೊಟ್ಟಳು.

" ಅಮ್ಮಾ ತಾಯಿ—ನಮ್ಮ ಸಾಮಾನುಗಳನ್ನು ಯಾರು ಇಳಿಸಿಕೊಡುತ್ತಾರೆ ? ಬರೀ ಗುಜ್ಜಾನೆ ಮರಿ ಹಾಗೆ ನಗುತ್ತಾ ನಿಂತರೆ ಆಯಿತೆ ?"—ಎಂದು ಕೊಂಚ ಜೋರಾಗೇ ಹೇಳಿದ.

" ಹೆದರಬೇಡಿ ವಿರಾಮ ಮನೆಗೆ ತೆರಳಿ ಅಲ್ಲಿಗೆ ಎಲ್ಲಾ ಬರುತ್ತದೆ" ಎಂದು ಮತ್ತೂ ಬಾಯಿ ಹಿಗ್ಗಿಸಿದಳು. ಬಲವಂತದ ನಗು ಅದು. ಔದಾರ್ಯದ ವಾರದಲ್ಲಿ ಸಿಟ್ಟಿನ ಪೋಸ್ಟಮಾಸ್ತರು ರೈಲ್ವೆ ಟಿಕೆಟ್ಟು ಮಾಸ್ತರುಗಳು ನಗುವ ನಗು ಅದು. ಆ ನಗುವಿನಲ್ಲಿ ಈ ಗಾಂಪರ ಗುಂಪಿನಿಂದ ಬಿಡುಗಡೆಯಾದ ನೆಮ್ಮದಿಯ ನಿರ್ವಿಕಾರತೆಯಿತ್ತು.

ಗಾಂಪರೊಡೆಯರು ಠೀವಿಯಿಂದ ವಿಮಾನದ ಮೆಟ್ಟಿಲುಗಳನ್ನಿಳಿದು ಸುತ್ತಲೂ ನೋಡಿದರು. ಮರುಳ ಆರಾಮವಾಗಿ ಮಲಗಿ ಡಾಮರು ನೆಲಕೆ ಮುತ್ತಿಟ್ಟುಬಿಟ್ಟ—ನೆಲ ಕಂಡೆವಲ್ಲಾ ಎಂಬ ಸಂತೋಷದ ಮುತ್ತಿಟ್ಟಿದ್ದ ಭೂಮಿ ತಾಯಿಗೆ. ಆಕೆಯ ಪ್ರಸಾದವೋ ಎಂಬಂತೆ—ಕಾದ ಡಾಮರು ನೆಲ ಸೊಗಸಾದ ಎರಡು ಬರೆಯನ್ನೂ ಮರುಳನ ತುಟಿಗಳಿಗೆ ಬರೆಯನ್ನು ಮೂಡಿಸಿದವು. " ಅಯ್ಯಯ್ಯಪ್ಪೊ" ಎಂದು ಕೂಗಿ ಓಡಿದಾಗ ವಿಮಾನಕ್ಕೆ ಪೆಟ್ರೋಲನ್ನು ತುಂಬುವ ಲಾರಿಯ ರಬ್ಬರು ಕೊಳವಿ ಡಕೋಟಾದ ರೆಕ್ಕೆಯ ಕೆಳಗೆ ಓಡಿದ ಅವನ ಹಣೆಗೆ ಬಡಿದು ಬಾಸುಂಡೆ ಮೂಡಿಸಿತು. " ಗುರುವರ್ಯ" ಎಂದು ಕೂಗುತ್ತಾ ಬಿದ್ದುಬಿಟ್ಟ. ಅವ ನನ್ನು ಮಂಕ—ಮಡೆಯರು ಅನಾಮತ್ತಾಗಿ ಹೊತ್ತು ಲೌಂಜಿನತ್ತ ಸಾಗಿಸಿದರು. ಬೊಂಬಾಯಿ ಸಾಂಟ್ರಾಕ್ರೂಸ್ ವಿಮಾನ ನಿಲ್ದಾಣದಲ್ಲಿ ಈ ರೀತಿಯ ಪ್ರಸಂಗ ಪ್ರಪ್ರಥಮವೆಂದು ಅಲ್ಲಿ ಸೇರಿದ ಮಂದಿ ತಮ್ಮ ತಮ್ಮೊಳು ಮಾತನಾಡಿಕೊಂಡರು.

ಗುರುಗಳು—“ ಈಗಲೇ ಈ ಬೊಂಬಾಯಲ್ಲೇ ಹೀಗೆ ಇನ್ನು ಲಂಡನ್ನಿನಲ್ಲಿ ಪ್ರಾಣವನ್ನೇ ಬಿಡುವರೋ—ಗಾಂಪದೇವ ಸುಖವಾಗಿ ಈ ಪ್ರಯಾಣ ಪ್ರವಾಸ ಮುಗಿಸಿಕೊಂಡು ಸ್ವಯಂ ನಾನೇ ನಿಮಗೆ ಸೀಪಕೋಡದ ಅಭಿಶೇಕ—ಶೇಕರ್ಣೆ ನೇವಿದ್ಯ ಮಾಡಿಸುವೆ” ಎಂದು ತಮ್ಮ ಕುಲದೇವರಲ್ಲಿ ಹರಕೆ ಹೊತ್ತರು.

ಹೊತ್ತ ತಂದ ಮರುಳನನ್ನು ಏರೋಡ್ರೋಮಿನ ಡಾಕ್ಟರು ನೋಡಿ ತುಟಿಗೆ ಹಣೆಗೆ ಮುಲಾಮು ಬಳಿದು ಹೋದರು. ಗಾಂಪರೊಡೆಯರು ಶಿಷ್ಯರಿಗೆ ನೆರಳಲ್ಲಿ ಜಾಗ ಮಾಡಿ ವಿಶ್ರಮಿಸಿಕೊಳ್ಳಲು ಏರ್ಪಡಿಸುವಂತೆ ಹೇಳಿದರು. ಮಡೆಯ ಗರ ಬಡಿದ ಗೊಂಬೆಯಂತೆ ಆ ಬಾರಿ ವಿಮಾನ ನಿಲ್ದಾಣದ ಕಟ್ಟಡ ನೋಡಿ ಬೆಪ್ಪಾಗಿದ್ದ. ಆ ಜನ-ಕನ್ನಡಿಯಂತೆ ಹೊಳೆವ ನೆಲ—ಸೋಫ ಕುರ್ಚಿ—ಅಂಗಡಿ—ಒಂದೆ ಎರಡೇ ಎಲ್ಲರೂ ಅವನಿಗೆ ಹೊಸದೇ. ಅವನಿಗೇನು ಇಡೀ ಗಾಂಪರ ಗುಂಪಿಗೇ ಹೊಸದು. ಸುತ್ತಲೂ ಕಣ್ಣುಗಳನ್ನೂ ಹೊರಳಿಸುತ್ತಾ ಹಾಗೇ ಬಂದು ಪ್ರಶಸ್ತವಾದ ಜಾಗದಲ್ಲಿ ಕೃಷ್ಣಾಜಿನ ಹಾಸಿ ಗುರುಗಳಿಗೆ ಜಾಗಾ ಮಾಡಿದೆ. ಸುತ್ತಲೂ ಶಿಷ್ಯರು ಕೂತರು.

“ ಶಿಷ್ಯಕೋಟಿಯೇ—ಹೊಸ ಜಾಗವೆಂದು ಗಾಬರಿ ಆಗಬೇಡಿ. ಎಲ್ಲಾ ತಿಳಿದವರಂತೆ ತಿಳಿಯದಿದ್ದರೂ ನಟಿಸಿ. ಧೈರ್ಯಂ ಸರ್ವತ್ರ ಸಾಧನಂ ಎಂಬ ವೀರೋಕ್ತಿಯನ್ನು ಕಾರ್ಯಕ್ಕೆ ತನ್ನಿ....” ಎಂದರು.

“ ಗುರುಗಳೇ ನನ್ನದೊಂದು ಸಲಹೆ.

“ ಏನದು ಮಂಕಯ್ಯಾ ”

“ ಸಾಕಷ್ಟು ಚಹಾ—ತಿಂಡಿ ಹಾರೋಪ್ಲೇನಿನಲ್ಲಿ ಆಗಿದ್ದರೂ—ಈಗ ಚಹಾ ಬೇಡವೇ ? ಅದಕ್ಕೆ ಅಲ್ಲಿ ಕಾಣುವ ಮೂರು ಕಲ್ಲನ್ನು ಈ ಮೂಲೆಯಲ್ಲಿ ಇರಿಸಿ ನಾಲ್ಕು ಪುಳ್ಳೆ ಆರಿಸಿ ಒಲೆ ಹೊತ್ತಿಸಿ ಚಹಾಕ್ಕೆ ಇಡಲೆ ? ”

“ ಎಲ್ಲರ ಅಭಿಪ್ರಾಯ ಹೇಗೆ ? ”—ಗಾಂಪರು.

” ಈ ಸಲಹೆಗೆ ನಮ್ಮ ಸಂಪೂರ್ಣ ಒಪ್ಪಿಗೆ ಇದೆ ಆದರೆ ಪಾತ್ರೆ ? ”

“ ಗುರುಗಳ ಕಮಂಡಲ ಇದೆ ”

“ ಅಲ್ಲಿ ಒಲೆ ಒತ್ತಿಸಿದರೆ ಯಾರೂ ಬೈಯ್ಯುವುದಿಲ್ಲವೊ ? ಮರುಳ ಸಂದೇಹ.

“ ಶಿವಶಿವ—ಧರ್ಮಸತ್ರ ಕಟ್ಟುವರುಂಟು ಅರವಟ್ಟಿಗೆ—ಕೋಸುಂಬ್ರಿ ಪಾನಕ ಪೂಜೆ ನೆಡೆಸೋರುಂಟು—ಮದುವೆ ಮುಂಜಿ ಮಾಡಿಸೋರುಂಟು— ಹೀಗದ್ದಲ್ಲಿ ಚಹಾ ಮಾಡಿಕೊಂಡರೆ ಅಡ್ಡಿ ಪಡಿಸೋರುಂಟೆ ? ಒಲೆ ಹಚ್ಚಲೇ ಮಂಕ ನನ ಮಗನೇ ”—ಎಂದು ಅವಲಕ್ಕಿ ಗಂಟು ತನ್ನ ಚೀಲದಿಂದ ತೆಗೆದ ಮಡ್ಡಿ.

ಕಲ್ಲು ತಂದು ಚೊಲ್ಲೋ ಸಿಂಮೆಂಟು ನೆಲದ ಮೇಲೆ ಒಲೆ ಹೂಡಿದ. ಪುಳ್ಳಿ ಆಯಲು ಎಲ್ಲರೂ ಹೋದಾಗ ಗುರುಗಳೇ ನೀಡಿದ್ದ ಕಮಂಡಲ ಒಲೆ ಮೇಲಿಟ್ಟು ಪುಳ್ಳಿಗಾಗಿ ಕಾದಿದ್ದರು.

" ಏ ಕ್ಯಾ ಹೈ—ಮಹರಾಜ್ "—ಎಂದ ಒಬ್ಬ ಖಾಕಿಧಾರಿ.

" ಎಹಿ ಚಹಾ ಹೈ "—ಗುರುವಾಣಿ.

" ಇದರ್ ಚಹ ಕರೇತೆ ಕೆರಾಮೆ ಏಟ್ ಬೀಳ್ತಾ ಹೈ "—ಎಂದ ಅವ. ಅವನೂ ಕನ್ನಡದ ಪೋಲಿಸಪ್ಪಾ—ಗಾಂಪರಿಗೆ ಕನ್ನಡ ಬಾರದೇನೋ ಎಂದು ಕನ್ನಡೋ ಹಿಂದಿಮೆ ಬಾತ್ ಆಡಿದ ಅವ.

" ಕನ್ನಡಾ ಬರ್ತದೇನಪ್ಪಾ ನಿಂಗೇ "

" ಅರೇ ನೀವೂ ನಮ್ಮವರೇ—ಸ್ವಾಮಿ ಇದೇನು ಹುಡುಗಾಟ—ಸಿಕ್ಕಿದ ಕಡೆ ಒಲೆ ಹಚ್ಚಿಸತೀರಾ—ನಿಮ್ಮನ್ನ ಬೇಕಾದರೆ ಜೈಲಿಗಿಕ್ಕ ಬಲ್ಲೆ ಈಗ—ತೆಗೀರಿ ಈ ಒಲೆ ಕಲ್ಲಾ—ನಮ್ಮವರೂ ಅಂತ ಬಿಟ್ಟೇನಿ "

—ಎಂದು ಕವಕ್ಕನೆ ಸಿಡಿದುಬಿದ್ದ ಆ ಪೋಲೀಸಪ್ಪ.

" ರಾಮರಾಮ ಚಹಾ ಮಾಡ್ಕೊಂಡ್ರೂ ನಿನ್ನ ತಕರಾರೇ....ಬಿಡು ಹೋಗಲಿ" ಎಂದು ಕಮಂಡಲದ ನೀರನ್ನೆ ಕುಡಿದು ತೇಗಿದರು.

ಈ ಸಮಯಕ್ಕೆ ಲೌಡ್ ಸ್ಪೀಕರಿನಿಂದ " ಗಾಂಪರೊಡೆಯರು ತಮ್ಮ ಸಾಮಾನುಗಳನ್ನು ವಶಕ್ಕೆ ಪಡೆಯಬೇಕು—ಮತ್ತು ಏರ್ ಇಂಡಿಯಾ ಇಂಟರ್ ನ್ಯಾಷೆನಲ್ ಬುಕಿಂಗ್ ಬೂತಿಗೆ ಬರಬೇಕು " ಎಂಬ ಕರೆ ಬಂತು. ಶಿಷ್ಯರುಗಳು ಕಂತೆ ಕಟ್ಟಿಗೆ ಆಯ್ದು ತಂದಿದ್ದನ್ನು ಪೋಲೀಸಿನವನ ಕಣ್ಣು ನೋಡಿ ಎಸೆದು ಬಿಟ್ಟರು.

ಎಲ್ಲರೂ ಗುರುಗಳ ಹಿಂದೆ ಹೋಗಿ ಸಾಮಾನುಗಳನ್ನು ಹೊತ್ತು—ಏರ್ ಇಂಡಿಯಾ ಇಂಟರ್ ನ್ಯಾಷನಲ್ ಆಫೀಸಿಗೆ ತೆರಳಿದರು. ಆ ರಾತ್ರಿಯೇ ಲಂಡನ್ನಿಗೆ ಹಾರುವುದುದರಿಂದ ಆಗಲೇ ಚಹಾ ಕುಡಿದರಾಯಿತೆಂದು ಸಮಾಧಾನ ಹೊಂದಿ ಕೊಂಡರು.

ಈ ತಂಡವನ್ನು ಕಂಡ AII ನೌಕರ ಮೂರ್ಛೆ ತಾಳಿದ.

—ದಾಶರಥಿ ದೀಕ್ಷಿತ್

ಏಪ್ರಿಲ್ 1 ರಿಂದ

ಶ್ರೀ ಕೃಷ್ಣ ಸಾಯಿ ಫಿಲಮ್ಸ್‌ರವರು ಅರ್ಪಿಸಿರುವ

★  ★

ಪ್ರಭಾತ್‌ರವರ—

ಗಾಂಧಾರಿ ಗರ್ವಭಂಗಂ

★

— ಬೆಂಗಳೂರು —

ಭಾರತ್ ★ ರೂಪಮಹಲ್

(ತೆಲುಗು) (ತಮಿಳು)

★

— ಮೈಸೂರು —

ಚಾಮುಂಡೇಶ್ವರಿ

(ತಮಿಳು)

—ವಿಕ್ರಮ್ ರಿಲೀಸ್


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.

Printed by B. S. Iyengar, Bangalore City
Publisher—B. N. Gupta. Editor—M. Sivaram.